# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 150 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 14.12.2024 • ಶನಿವಾರ • ಪುಟ:04 • ಬೆಲೆ:2
Volume:02 • Issue: 150 • PRGI No:KARKAN/2023/88055 • VIJAYANAGARA • 14.12.2024 • Saturday • Page:04 • Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper



ಸುದ್ದಿ, ಜಾಹೀರಾತು,
ಜಾಗೃತಿ ಪ್ರಕಟಣೆಗಳ ಪ್ರಕಟಣೆಗಾಗಿ
ಸಂಪರ್ಕಿಸಿ
ಮೊ: 9448633038
e-mail: hampitimes@gmail.com


# ಇಂದು ಯಾರಿಗೆ ಯಾವ ಪಾಠ ಮಾಡ್ತೀರಿ ಸರ್

## ನಿತ್ಯ ಮಕ್ಕಳಲ್ಲಿ ಕಾಡುವ ಪ್ರಶ್ನೆ ಯಾವ ಸರ್ ಬರ್ತಾರೆ? ನಮಗೋ, ಅವರಿಗೋ ಗೊತ್ತಿಲ್ಲ

## ಎರಡೇ ಕೊಠಡಿಗಳಲ್ಲಿ 1 ರಿಂದ 5ನೇ ತರಗತಿ ಮಕ್ಕಳಿಗೆ ಪಾಠ | ಗಡಿಗ್ರಾಮ ಶಾಲೆಯ ದುಸ್ಥಿತಿ


## ಮಕ್ಕಳ ಕಲಿಕೆಗೆ ಭದ್ರ ಬುನಾದಿಯಾಗಬೇಕಿದೆ ಪ್ರಾಥಮಿಕ ಶಿಕ್ಷಣ | ಗಮನಹರಿಸಬೇಕಿದೆ ಸರ್ಕಾರ

■ ಮಾರೇಶ ತಿಪ್ಪೇಹಳ್ಳಿ ಕೂಡ್ಲಿಗಿ

ತಾಲೂಕಿನ ಕಾನಾಹೊಸಹಳ್ಳಿ ಹೋಬಳಿಯ ಪೂಜಾರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿ ಯ ಗಡಿಗ್ರಾಮ ಮಾಳೆಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯು ಸುಮಾರು 40 ವರ್ಷಗಳ ಹಿಂದೆ ಕಟ್ಟಿದ್ದ ಹಂಚಿನ ಹೊದಿಕೆ ಯ ಕಟ್ಟಡ ಶಿಥಿಲಗೊಂಡಿದ್ದು ಪ್ರತಿನಿತ್ಯ ವಿದ್ಯಾರ್ಥಿ ಗಳು ಭಯದ ವಾತಾವರಣದಲ್ಲಿ ಕಾಲ ನೂಕುವಂತಾಗಿದೆ.

ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ಸಂಪೂರ್ಣ ಹಾಳಾಗಿದ್ದು, ಯಾವ ಕ್ಷಣದಲ್ಲಿ ಬೀಳುವುದೋ ಎಂಬ ಜೀವಭಯದ ಆತಂಕದಲ್ಲೆ ಮಕ್ಕಳು ಕಲಿಯುವಂತಾಗಿದೆ. ಈ ಶಾಲೆಯಲ್ಲಿ 1 ರಿಂದ 5ನೇ ತರಗತಿವರೆಗೆ 30 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತಿದ್ದಾರೆ. ಕೆಲ ವರ್ಷಗಳ ಹಿಂದೆ ನಿರ್ಮಿಸಿದ ಶಾಲೆಯ 1 ಕೊಠಡಿ ಮಾತ್ರ ತಕ್ಕಮಟ್ಟಿಗೆ ಯೋಗ್ಯವಾಗಿದೆ, ಅದನ್ನು ಆಫೀಸ್ ರೂಮ್ ಮಾಡಲಾಗಿದೆ. ಒಂದು ಚಿಕ್ಕ ಕೊಠಡಿ ಅಡುಗೆ ಮಾಡುವುದಕ್ಕೆ ಉಪಯೋಗಿಸುತ್ತಾರೆ. ಅದು ಸಹ ಶಿಥಿಲಾವಸ್ಥೆಯಲ್ಲಿದೆ. ಶಾಲೆಯ ಹಳೆಯ ಹಂಚಿನ ಎರಡು ಕೊಠಡಿಗಳು ಸಂಪೂರ್ಣ ಶಿಥಿಲಗೊಂಡಿವೆ. 2 ಕೊಠಡಿಯಲ್ಲಿ 5 ವರ್ಗಗಳ ಮಕ್ಕಳು ಕಲಿಯುತ್ತಿದ್ದಾರೆ. ಹೀಗಾಗಿ ಶಿಕ್ಷಕರು ಹಾಗೂ ಮಕ್ಕಳಿಗೆ ಸ್ಥಳಾವಕಾಶದ ಕೊರತೆಯಾಗುತ್ತಿದೆ. ಶಾಲೆಯ ಹಳೆಯ ಹಂಚಿನ ಕಟ್ಟಡಗಳ ಗೋಡೆ ಮತ್ತು ಅಡುಗೆ ಮೇಲ್ಛಾವಣಿ ಬಿರುಕುಬಿಟ್ಟಿದ್ದು, ಮಳೆ ಬಂದರೆ ಸೋರುತ್ತವೆ. ಗುಣಮಟ್ಟ ಹಾಗೂ ನಿರ್ವಹಣೆಯ ಕೊರತೆಯಿಂದಾಗಿ ಕಟ್ಟಡ ಉಪಯೋಗಕ್ಕೆ ಬಾರದಂತಾಗಿದೆ. ಅನಾಹುತಗಳ ನಂತರ ಸರ್ಕಾರ ಪರಿಹಾರ ನೀಡುವ ಬದಲಿಗೆ ಮೊದಲೇ ಎಚ್ಚೆತ್ತುಕೊಂಡು ಅಗತ್ಯ ಕ್ರಮವಹಿಸಿ ಮಕ್ಕಳಿಗೆ ಸುಸಜ್ಜಿತ ಕಟ್ಟಡ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಎಂದು ಶಾಲೆಯ ಎಸ್ಡಿಎಂಸಿ ಅಧ್ಯಕ್ಷರು, ಸರ್ವ ಸದಸ್ಯರು ಹಾಗೂ ಪಾಲಕರು ಒತ್ತಾಯಿಸಿದ್ದಾರೆ.





ಮಾಳೆಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಸುಮಾರು 45 ವರ್ಷಗಳ ಹಿಂದಿನ ಕಟ್ಟಡವಾಗಿದ್ದು, ಹಂಚಿನ ಹೊದಿಕೆ ಶಿಥಿಲಗೊಂಡಿವೆ. ಜೋರಾಗಿ ಗಾಳಿ, ಮಳೆ ಬಂದರೆ ಶಾಲೆಯ ಕಟ್ಟಡ ನೆಲಕಚ್ಚುವ ಸಂಭವವಿದ್ದು, ಇಂತಹ ಸ್ಥಿತಿಯಲ್ಲಿಯೇ ಮಕ್ಕಳು ಆತಂಕದಲ್ಲೇ ಅಕ್ಷರಭ್ಯಾಸ ಮಾಡುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಸರಕಾರ ಗಮನ ಹರಿಸಬೇಕು. ಮಕ್ಕಳ ಆತಂಕ ದೂರಾಗಿಸಬೇಕು.

– ಮಂಜಪ್ಪ ಅಧ್ಯಕ್ಷರು, ಎಸ್‌ಡಿಎಂಸಿ, ಮಾಳೆಹಳ್ಳಿ

ಶಾಲೆಯ ಎರಡು ಕೊಠಡಿಗಳು ಶಿಥಿಲಗೊಂಡಿವೆ, ಶಾಸಕರಿಗೆ ವರದಿ ಸಲ್ಲಿಸಲಾಗಿದ್ದು, ಶಾಸಕರ ಅನುದಾನದಲ್ಲಿ ಎರಡು ಕೊಠಡಿಗಳಿಗೆ ಅನುಮೋಧನೆಗೆ ಕಳಿಸಲಾಗಿದೆ. ಶಿಥಿಲಗೊಂಡ ಕೊಠಡಿಗಳನ್ನು ತೆರವುಗೊಳಿಸಿ, ಅನುಮತಿ ದೊರೆತಾಕ್ಷಣ ಹೊಸ ಕೊಠಡಿ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು.

– ಪದ್ಮನಾಭ ಕರ್ಣಂ. ಬಿಇಒ ಕೂಡ್ಲಿಗಿ

## ಆನಂದ ಬಾಣ




## ಅಂಚೆ ಇಲಾಖೆ: ಡಿಸೆಂಬರ್ 16 ರಂದು ನಿವೃತ್ತ ಪಿಂಚಣಿದಾರರಿಗೆ ಪಿಂಚಣಿ ಅದಾಲತ್

ಹಂಪಿ ಟೈಮ್ಸ್ ಹೊಸಪೇಟೆ

ಅಂಚೆ ಇಲಾಖೆಯಲ್ಲಿ ನಿವೃತ್ತರಾಗಿ ಪಿಂಚಣಿ ಪಡೆಯುತ್ತಿರುವ ಇಲಾಖಾ ನೌಕರರಿಗೆ ಮತ್ತು ಕುಟುಂಬ ಪಿಂಚಣಿ ಪಡೆಯುತ್ತಿರುವ ಕುಟುಂಬ ಪಿಂಚಣಿದಾರರಿಗೆ ಡಿಸೆಂಬರ್ 16 ರಂದು ಸಂಜೆ 4 ಗಂಟೆಗೆ ಬಳ್ಳಾರಿ ವಿಭಾಗಿ ಯ ಕಚೇರಿಯಲ್ಲಿ ಪಿಂಚಣಿ ಅದಾಲತ್ ಆಯೋಜಿಸಲಾಗಿದೆ. ಪಿಂಚಣಿದಾರರು ತಮ್ಮ ಕುಂದು ಕೊರತೆಗಳಿದ್ದಲ್ಲಿ ಅಹವಾಲುಗ ಳೊಂದಿಗೆ ಡಿ.16.ರಂದು ಸಂಜೆ 4 ಗಂಟೆಗೆ ನಡೆಯುವ ಅದಾಲತ್‌ನಲ್ಲಿ ಭಾಗವಹಿಸ ಬಹುದು ಎಂದು ಬಳ್ಳಾರಿ ವಿಭಾಗ ದ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

## ಯುವಕ, ಯುವತಿಯರಿಗೆ ನಾಯಕತ್ವ ತರಬೇತಿಗೆ ಅರ್ಜಿ ಅಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

2024–25 ನೇ ಸಾಲಿಗೆ ಕರ್ನಾಟಕ ಭೋವಿ ಅಭಿವೃದ್ದಿ ನಿಗಮದಿಂದ ಭೋವಿ ಜನಾಂಗದ ಯುವಕ, ಯುವತಿಯರಿಗೆ ಅಸ್ಪೃಶ್ಯತೆ ಆಚರಣೆ ನಿವಾರಣೆ, ಸಂವಿಧಾನ ಸಾಮಾಜಿಕ ನ್ಯಾಯದ ಕಾನೂನು ಕುರಿತು ಜಾಗೃತಿ ಮೂಡಿಸುವ ನಾಯಕತ್ವದ ತರಬೇತಿಗೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಸಿದ್ದಲಿಂಗ ತಿಳಿಸಿದ್ದಾರೆ. ಜಿಲ್ಲಾ ಕಚೇರಿಯಿಂದ ಅರ್ಜಿ ನಮೂನೆಯನ್ನು ಪಡೆದು ಡಿ.31 ರೊಳಗೆ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿ ಗಾಗಿ 9731494557, 8050665060 ಕ್ಕೆ ಸಂಪರ್ಕಿಸಲು ಕೋರಲಾಗಿದೆ.

## ಕೊಟ್ಟೂರು ಮಹಲ ಮಠದ ನೂತನ ಜಗದ್ಗುರು ಶ್ರೀ ಮ.ನಿ ಸೋಮಶೇಖರ ಆಶೀರ್ವಚನ

# ಶ್ರೀಪೀಠದ ಪರಂಪರೆಯಂತೆ ಕಾಯಕ ಮಾಡುವೆ

■ ಹಂಪಿ ಟೈಮ್ಸ್ ಕೊಟ್ಟೂರು.

ಮಹಲ ಮಠದ ಲಿಂಗೈಕ್ಯ.ಶ್ರೀ.ಮ.ನಿ.ಜಗದ್ಗುರು ಶಂಕರ ಮಹಾಸ್ವಾಮಿಗಳು, ನಮ್ಮ ಪಟ್ಟಾಧಿಕಾರದ ಗುರುವಾರ್ಯರು ತೋರಿರುವ ಸನ್ಮಾರ್ಗ ಹಾಗೂ ಶ್ರೀ ಪೀಠದ ಪರಂಪರೆಯಂತೆ ಶ್ರೀ ಕ್ಷೇತ್ರಕ್ಕೆ, ಮಠಕ್ಕೆ ಹೂ ತರುವ ಕಾರ್ಯಕ್ಕೆ ಮುಂದಾಗುವೆ ಹೊರತು ಹುಲ್ಲು ತರುವ ಕಾರ್ಯಕ್ಕೆ ಮುಂದಾಗುವುದಿಲ್ಲ ಎಂದು ಮಹಲ ಮಠ ಸಂಸ್ಥಾನ ಮಠದ ನೂತನ ಜಗದ್ಗುರುಗಳು ಶ್ರೀ.ಮ.ನಿ ಸೋಮಶೇಖರ ಮಹಾಸ್ವಾಮಿಗಳು ಹೇಳಿದರು.

ಗುರುವಾರ ಪಟ್ಟಣದ ಮಹಾಲ ಮಠದ ಲಿಂಗೈಕ್ಯ.ಶ್ರೀ.ಮ.ನಿ.ಜಗದ್ಗುರುಗಳು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಹಿರಿಯ ಕ್ರಿಯಾ ಮೂರ್ತಿಗಳು ಶಂಕರ ಮಹಾಸ್ವಾಮಿಗಳವರ ಪ್ರಥಮ ವರ್ಷದ ಪುಣ್ಯಾರಾಧನೆಗೆ ಆಗಮಿಸಿ ಈ ವೇಳೆ ಮಹಲ ಮಠದ ಪೀಠಾರೋಣ ಅಲಂಕರಿಸಿ ಆಶೀರ್ವಚನ ನೀಡಿದರು.

ಲಿಂಗೈಕ್ಯ ಶಂಕರ ಮಹಾಸ್ವಾಮಿಗಳು ಆಸ್ತಿ, ಪಾಸ್ತಿಗೆ ಆಪೇಕ್ಷಿಸಿದವರಲ್ಲ, ಬೋಳೆ ಶಂಕರನಂತಿದ್ದವರು, ತಮ್ಮ 98 ವರ್ಷದ ಜೀವಿತಾವದಿಯೊಳಗೆ ಎಂದು ಜಗದ್ಗುರು ಗಳೆಂದು ಬೀಗಿದವರಲ್ಲ, ಅವರಂತೆ ನಾವು ಕೂಡಾ ಇಲ್ಲಿನ ಗುರುಗಳು ಕ್ರಿಯಾಮೂರ್ತಿಗಳು ಕೊಟ್ಟೂರು ದೇವರು ಶಿವಪ್ರಕಾಶ ಸ್ವಾಮಿಗಳ ಮಾರ್ಗದರ್ಶನದಲ್ಲಿ ನಡೆದುಕೊಳ್ಳುವುದಾಗಿ ತಿಳಿಸಿದರು.



ಎಂಎಂಜೆ ಹರ್ಷವರ್ದನ ಅವರು ಮಹಾಲ ಮಠದ ಸಮಸ್ತ ದೈವದವರು ಹಾಗೂ ಕಟ್ಟಿಮನಿ ದೈವದವರು ಅವರಂತೆ ತಮಗೂ ಸಹಕಾರ ನೀಡಿ, ಇಲ್ಲಿನ ಎಲ್ಲಾ ಕಾರ್ಯಗಳಲ್ಲಿ ನಾವು ಚಾಚು ತಪ್ಪದೆ ಪಾಲ್ಗೊಳ್ಳುವೆವು ಎಂದು ಆಶೀರ್ವಚನ ನೀಡಿದರು.

ಈ ವೇಳೆ ಉಜ್ಜಿನಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳು ಎಂಎಂಜೆ ಹರ್ಷವರ್ದನ, ನಂದಿಪುರದ ಮಹೇಶ್ವರ ಸ್ವಾಮಿಗಳು ಕ್ರಿಯಾ ಮೂರ್ತಿಗಳು ಕೊಟ್ಟೂರು ದೇವರು ಶಿವಪ್ರಕಾಶ ಸ್ವಾಮಿಗಳು ಸೇರಿದಂತೆ ಇತರರು ಮಾತನಾಡಿದರು. ಈ ವೇಳೆ ನೀಲುಗುಂದದ ಶಿವಾಚಾರ್ಯರು, ಬೆಣ್ಣಿಹಳ್ಳಿ ಸ್ವಾಮಿಗಳು, ಗದ್ದಿಕೇರಿ ಸ್ವಾಮಿಗಳು, ಕಾರಿಕಟ್ಟಿಯ ಶಿವಾಚಾರ್ಯರು ಸೇರಿದಂತೆ ಮಹಲ ಮಠದ ಸಮಸ್ತ ದೈವಸ್ಥರು ಹಾಗೂ ಕಟ್ಟಿಮನಿ ದೈವದವರು ಹಾಜರಿದ್ದರು.

## ಪೂರ್ವಿಕರ ಊಟದ ಸೊಗಡು ಇಂದಿನ ಮಕ್ಕಳಿಗೆ ತಿಳಿಸಿ | ಡಿಸಿ ಎಂ.ಎಸ್.ದಿವಾಕರ ಹೇಳಿಕೆ

# ಜೋಳ ತಿಂದವ ಶಕ್ತಿವಂತ, ನವಣೆ ಉಂಡವ ಬುದ್ದಿವಂತ

### ಸಿರಿಧಾನ್ಯ ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆಯಲ್ಲಿ ಬೇಲ್ದಣ್ಣು ಹೋಳಿಗೆ, ರಾಗಿ ಕೀಲ್ಸಾ, ಗಾರಿಗೆ, ರೊಟ್ಟಿ, ಚಕ್ಕಲಿ, ನವಣಕ್ಕಿ ಬಿರಿಯಾನಿ

■ ಹಂಪಿ ಟೈಮ್ಸ್ ಹೊಸಪೇಟೆ

ಜೋಳ ತಿಂದವನು ಶಕ್ತಿವಂತ, ನವಣೆ ತಿಂದವ ಬುದ್ದಿವಂತ ಆಗುವನು ಎಂಬಂತೆ ಜೋಳ, ರಾಗಿ, ನವನಕ್ಕಿ, ಅಗಸೆ, ಅಕ್ಕರಿ ಸೊಪ್ಪು ಹಾಗೂ ಸಾಮೆ, ಬರಗು ಸೇರಿದಂತೆ ಇನ್ನಿತರ ಧಾನ್ಯ ಮತ್ತು ಸೊಪ್ಪು ತರಕಾರಿಗಳಿಂದ ವಿಧವಿಧವಾದ ತಿನಿಸುಗಳುನ್ನು ಸಿರಿಧಾನ್ಯ ಮತ್ತು ಮರೆತು ಹೋದ ಪಾಕ ಸ್ಪರ್ಧೆಯಲ್ಲಿ ಸ್ಪರ್ಧಾರ್ಥಿಗಳು ತಯಾರಿಸಿದ್ದರು.

ಹೊಸಪೇಟೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಿರಿಧಾನ್ಯ ಮತ್ತು ಮರೆತು ಹೋದ ಪಾಕ ಸ್ಪರ್ಧೆಯಲ್ಲಿ ಜಿಲ್ಲೆಯ ಎಲ್ಲ ತಾಲ್ಲೂಕುಗಳಿಂದ ಸ್ಪರ್ಧಾರ್ಥಿಗಳು ಭಾಗವಹಿಸಿ ಮನೆಯಲ್ಲಿ ತಯಾರಿಸಿದ ಖಾದ್ಯಗಳನ್ನು ಪ್ರದರ್ಶಿಸಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮತ್ತು ಜಿಲ್ಲಾ ಪಂಚಾಯಿತ್ ಸಿಇಓ ನೋಂಗ್ಜಾಯ್ ಮಹಮ್ಮದ್ ಅಲಿ ಅಕ್ರಂ ಷಾ ಅವರು ಪಾಕ ಸ್ಪರ್ಧೆಯಲ್ಲಿ ಸ್ಪರ್ಧಾರ್ಥಿಗಳು ಪ್ರದರ್ಶಿಸಿದ ತಿನಿಸುಗಳ ರುಚಿ ಸವಿದರು.

ಜಿಲ್ಲಾಧಿಕಾರಿ ಮಾತನಾಡಿ, ಪೂರ್ವಿಕರ ಊಟದ ಸೊಗಡು ಇಂದಿನ ಮಕ್ಕಳಿಗೆ ತಿಳಿಯಬೇಕು. ಇಲ್ಲಿ ತಯಾರಿಸಿದ ಖಾದ್ಯಗಳು ಕೇವಲ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗದೆ ಪ್ರತಿದಿನದ ಊಟದಲ್ಲಿರಬೇಕು. ಪೋಷಕರು ಮಕ್ಕಳಿಗೆ ಸಾಂಪ್ರದಾಯಿಕ ಆಹಾರದ ಮೇಲೆ ಒಲವು ಹೆಚ್ಚಾಗುವಂತೆ ಮಾಡಬೇಕು. ಮೊದಲು ಧಾನ್ಯಗಳನ್ನು ಬೆಳೆದವರು ಅವುಗಳನ್ನು ಬಳಸ ಬೇಕು ನಂತರ ಇತರರಿಗೂ ಅದರ ಮಹತ್ವ ತಿಳಿಸಬೇಕು, ಆಗ ಮಾತ್ರ ಧಾನ್ಯಗಳಿಗೆ ಹೆಚ್ಚಿನ ಪ್ರಾತಿನಿಧ್ಯಸಿಗುತ್ತದೆ ಎಂದು ತಿಳಿಸಿದರು. >>4



ಸ್ಪರ್ಧೆಯಲ್ಲಿ 47 ಸ್ಪರ್ಧಾರ್ಥಿಗಳು ಭಾಗವಹಿಸಿದ್ದು, ಅದರಲ್ಲಿ ಖಾರ ಖಾದ್ಯಗಳ ವಿಭಾಗದಲ್ಲಿ ಪ್ರಥಮ ರೂಪ.ಎಂ, ದ್ವಿತೀಯ ಸೃಷ್ಠಿ, ತೃತೀಯ ಮಾಬನ್ನಿ ಅವರು ಹಾಗೂ ಸಿಹಿ ವಿಭಾಗದಲ್ಲಿ ಪ್ರಥಮ ಜ್ಯೋತಿ ವಿ.ಐ, ದ್ವಿತೀಯ ಸೌಭಾಗ್ಯ, ತೃತೀಯ ಸಾವಿತ್ರಿ ಬಾಯಿ ಮತ್ತು ಮರೆತು ಹೋದ ಖಾದ್ಯಗಳ ವಿಭಾಗದಲ್ಲಿ ಪ್ರಥಮ ಪ್ರತಿಮಾ ಪಾಟೀಲ್, ದ್ವಿತೀಯ ಸರ್ವ ಮಂಗಳ, ತೃತೀಯ ಸ್ಥಾನವನ್ನು ಕೆ.ಕಲ್ಲಪ್ಪ ಅವರು ಪಡೆದುಕೊಂಡರು.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE READERS

**Classified Advertisements**
Examples: Job postings, Real estate listings , Matrimonial ads, Lost and found, Services (e.g., tutors, plumbers)

**Display Advertisements**
Examples: Brand promotions, Product launches, Corporate announcements

**Public Notices and Announcements**
Examples: Tender notices, Government announcements, Legal notices, Obituaries

**Recruitment Advertisements**
Examples: Company job openings, Walk-in interviews, Recruitment drives

**Health and Wellness Advertisements**
Examples: Hospitals or clinics, Medical equipment, Health supplements

**Educational Advertisements**
Examples: College admissions, Coaching center promotions, Training programs

**Event Advertisements**
Examples: Cultural programs, Exhibitions, Concerts or festivals

**Retail Advertisements**
Examples: Sales or discounts, New store openings

**Entertainment Advertisements**
Examples: Movie releases, TV show promotions, Theater events

**Political Advertisements**
Campaigns or announcements related to political parties or candidates.

**Real Estate Advertisements**
Ads for buying, selling, or renting property.

**Matrimonial Advertisements**
Personal ads for seeking marriage alliances. Examples: Bride or groom profiles, Community-specific ads

**Product Advertisements**
Examples: Electronics, Automobiles, FMCG products

contact for more information
M: 94 48 63 30 38
Email:- hampitimes@gmail.com

## ಸ್ಟುಡೆಂಟ್ ಕಾಲಂ


# ಗುರುಗಳ ಒಪ್ಪಿಗೆ



ರಾಮಪುರ ಎಂಬ ಊರು. ಆ ಊರಿನಲ್ಲಿ ಸರ್ಕಾರಿ ಪ್ರೌಢಶಾಲೆ ಇದೆ. ಒಂಬತ್ತನೇ ತರಗತಿಯಲ್ಲಿ ರಮೇಶ ಮತ್ತು ಸೋಮೇಶ ಎಂಬ ಇಬ್ಬರು ಹುಡುಗರು ಕ್ಲಾಸಿಗೆ ಟಾಪರ್ ಇದ್ದರು. ರಮೇಶನ ಮನೆಯಲ್ಲಿ ತುಂಬಾ ಬಡತನ ಇತ್ತು. ಅವನು ವಾರದಲ್ಲಿ ಎರಡು ದಿನ ಶಾಲೆಗೆ ರಜೆ ಹಾಕುತ್ತಿದ್ದ. ಆದರೂ ಅವನು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದ. ಅವನ ಕಷ್ಟವನ್ನು ನೋಡಿ ರಾಹುಲ್ ಎಂಬ ಒಬ್ಬ ವ್ಯಕ್ತಿ ಅವನಿಗೆ ಸೈಕಲ್ ಅನ್ನು ದಾನವಾಗಿ ನೀಡಿದನು.

ಸ್ವಲ್ಪ ದಿನಗಳು ಕಳೆದವು. 9ನೇ ತರಗತಿ ಮೊದಲನೆ ಸಂಕಲನಾತ್ಮಕ (ಅರ್ದ ವಾರ್ಷಿಕ) ಪರೀಕ್ಷೆ ನಡೆದು ಅದರ ಫಲಿತಾಂಶ ತಿಳಿಸಿದರು. ಅದರಲ್ಲಿ ರಮೇಶನು ಶೇಕಡಾ 95 ಅಂಕ ಪಡೆದುಕೊಂಡಿದ್ದ. ಸೋಮೇಶ ಕೂಡ ಶೇಕಡಾ 90 ಅಂಕ ಪಡೆದಿದ್ದ. ಇಬ್ಬರೂ ಒಳ್ಳೆಯ ವಿದ್ಯಾಭ್ಯಾಸ ಮಾಡುತ್ತಿದ್ದರು.

ಪರೀಕ್ಷೆಯ ನಂತರ ಶಾಲೆಗೆ ಹದಿನೈದು ದಿನದ ದಸರಾ ರಜ ನೀಡಲಾಗಿತ್ತು. ಆ ರಜೆಯಲ್ಲಿ ರಮೇಶ ಹೊಲದ ಕೆಲಸವನ್ನೆಲ್ಲ ಮುಗಿಸಿಕೊಂಡ. ರಜೆಯ ನಂತರ ಪ್ರತಿ ದಿನ ಬರುತ್ತಿದ್ದ. ಸ್ವಲ್ಪ ದಿನದ ನಂತರ ವಾರ್ಷಿಕ ಪರೀಕ್ಷೆ ಪರೀಕ್ಷೆ ಪ್ರಾರಂಭವಾಯಿತು. ಎಲ್ಲಾ ವಿದ್ಯಾರ್ಥಿಗಳು ಚೆನ್ನಾಗಿ ಪರೀಕ್ಷೆ ಬರೆದರು. ಅದರಲ್ಲಿ ರಮೇಶ ಹಾಗೂ ಸೋಮೇಶ ಉತ್ತಮ ಫಲಿತಾಂಶವನ್ನು ಪಡೆದುಕೊಂಡರು. ಶಾಲೆಗೆ ಎರಡು ತಿಂಗಳು ಬೇಸಿಗೆ ರಜೆ ಮುಗಿಸಿಕೊಂಡು 10ನೇ ತರಗತಿಗೆ ದಾಖಲಾದರು. ಆಗ ಸರ್ಕಾರದಿಂದ ಉಚಿತ ಪ್ರವಾಸ ಜಾರಿಗೆ ಆಗಿತ್ತು. ಪ್ರತಿ ತರಗತಿಯಲ್ಲಿ ಚೆನ್ನಾಗಿ ಅಭ್ಯಾಸ ಮಾಡುವ ಇಬ್ಬರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದ್ದರು. ಅದರಲ್ಲಿ ರಮೇಶ ಹಾಗೂ ಸೋಮೇಶ ಆಯ್ಕೆಯಾದರು.



ಸೋಮೇಶ ತನ್ನ ಪಾಲಕರಿಂದ ಒಪ್ಪಿಗೆ ಪತ್ರ ಪಡೆದುಕೊಂಡು ಬಂದನು. ಆದರೆ ರಮೇಶ ತನ್ನ ಮನೆಯಲ್ಲಿ ಪಾಲಕರು ಒಪ್ಪುವುದಿಲ್ಲ ಮತ್ತು ಪ್ರವಾಸಕ್ಕೆ ಕಳಿಸೋದಿಲ್ಲ ಎಂದು ಗುರುಗಳಿಗೆ ಹೇಳಿದನು. ಆಗ ಗುರುಗಳೆಲ್ಲ ಸೇರಿ ಮಾತನಾಡಿ ಒಂದು ನಿರ್ಧಾರಕ್ಕೆ ಬಂದರು. ಮುಖ್ಯಗುರುಗಳು ರಮೇಶನನ್ನು ಕರೆದು 'ಪ್ರವಾಸಕ್ಕೆ ಹೋಗಲು ಇಷ್ಟ ಇದೇಯಾ?' ಎಂದು ಕೇಳಿದರು. ಅದಕ್ಕೆ ರಮೇಶ "ಹೌದು ಸರ್, ನನಗೆ ಇಷ್ಟ ಇದೆ" ಎಂದನು. 'ಹಾಗಾದ್ರೆ ನಾವೇ ಒಪ್ಪಿಗೆ ಕೊಟ್ಟು ಕಳಿಸುತ್ತೇವೆ. ನೀನು ಹೋಗಲು ತಯಾರಾಗು' ಎಂದು ಹೇಳಿದರು. ಆಗ ರಮೇಶ ಒಪ್ಪಿಕೊಂಡು ಪ್ರವಾಸಕ್ಕೆ ಹೋಗಿ ಬಂದನು. ರಮೇಶನ ದೊಡ್ಡವನಾದ ಮೇಲೆ ಶಾಲೆಗೆ ಏನಾದರೂಂದು ದಾನವಾಗಿ ನೀಡುತ್ತೇನೆ ಎಂದು ತನ್ನ ಗುರುಗಳಿಗೆ ಹೇಳಿದನು. ಗುರುಗಳ ಒಪ್ಪಿಗೆಯಿಂದ ರಮೇಶ ಪ್ರವಾಸ ಕೈಗೊಂಡಿದ್ದ.

**– ಯು. ವಿನಯ್ ಕುಮಾರ್ 9ನೇ ತರಗತಿ.**
**ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹಗರಿಬೊಮ್ಮನಹಳ್ಳಿ(ತಾ) ವಿಜಯನಗರ(ಜಿ)**

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಘರ್ಷಣೆ ಇಲ್ಲದಿದ್ದರೆ...

ಹೊರಗಿನಿಂದ ಮನೆಯೊಳಗೆ ಓಡಿಬಂದ ಪವನ ಕಾಲು ಜಾರಿ ಬಿದ್ದ. ಪಕ್ಕದಲ್ಲಿದ್ದ ಉಷ ಅವನನ್ನು ನೋಡಿ ಕಿಸ್ಸಕ್ಕನೆ ನಕ್ಕಳು. ಪವನನಿಗೆ ಅವಮಾನವಾದಂತಾಯ್ತು. ಇದನ್ನು ಗಮನಿಸಿದ ತಾತ "ಇರಲಿ ಬಿಡೋ, ನೀನೇನು ಬೇಕೂಂತ ಬಿದ್ದಿಲ್ಲ. ಈಗ ತಾನೆ ನಿನ್ನಮ್ಮ ನೆಲ ಒರೆಸಿಕೊಂಡು ಹೋದಳು. ಅಲ್ಲಿನ್ನೂ ನೀರು ಇತ್ತೂ ಅನ್ಸುತ್ತೆ. ಅದಕೆ ಕಾಲು ಜಾರಿ ಬಿದಿದ್ದೀಯ" ಎನ್ನುತ್ತಾ ಅವನನ್ನು ಸಮಾದಾನ ಮಾಡಿದರು ಮತ್ತು 'ಗಾಯವೇನಾದರೂ ಆಯ್ತಾ' ಎಂದರು. ತಾತನ ಮಾತಿನಿಂದ ಪುಳಕಿತನಾದ ಪವನ 'ಏನೂ ಆಗಿಲ್ಲ ಬಿಡು ತಾತ' ಎಂದು ತಾತನ ಬಳಿ ಮಾತಿಗೆ ಕುಳಿತ. 'ತಾತ, ಎಲ್ಲಾ ಸಮಯದಲ್ಲೂ ಕಾಲು ಯಾಕೆ ಜಾರಲ್ಲ. ನೀರಿದ್ದರೆ ಮಾತ್ರ ಯಾಕೆ ಜಾರುತ್ತೆ?' ಎಂದು ಪ್ರಶ್ನಿಸಿದ. ಅವನ ಪ್ರಶ್ನೆಗೆ ಉತ್ತರವಾಗಿ 'ನೋಡು ನುಣುಪಾದ ನೆಲದ ಮೇಲೆ ನೀರು ಬಿದ್ದಾಗ, ಅದರ ಮೇಲೆ ಕಾಲಿಟ್ಟರೆ ಅಲ್ಲಿ ಘರ್ಷಣೆ ಇಲ್ಲದಂತಾಗುತ್ತೆ' ಆಗ ನಾವು ಜಾರಿ ಬೀಳುತ್ತೇವೆ. ಘರ್ಷಣೆ ಇರೋದ್ರಿಂದ ನಾವು ಎಲ್ಲಾ ಸಮಯದಲ್ಲೂ ಜಾರಿ ಬೀಳಲ್ಲ' ಎಂದರು ತಾತ. 'ತಾತ ಘರ್ಷಣೆ ಇಲ್ಲದಿದ್ರೆ ಇನ್ನೂ ಏನೇನಾಗುತ್ತೆ?' ಎಂದು ಉಷ ತಟ್ಟನೇ ಪ್ರಶ್ನಿಸಿದಳು. ನಿಮ್ಮದೂ ಇದೇ ಪ್ರಶ್ನೆಯಾಗಿದ್ದರೆ ಮುಂದೆ ಓದಿ.

ನಮ್ಮೆಲ್ಲರ ಬದುಕಿನಲ್ಲಿ ಘರ್ಷಣೆ ಬಹಳ ಮುಖ್ಯ. ಘರ್ಷಣೆ ಇಲ್ಲದಿದ್ದರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಾಡಲು ಆಗುತ್ತಿರಲಿಲ್ಲ. ವಸ್ತುಗಳನ್ನು ಹಿಡಿಯಲು ಆಗುತ್ತಿರಲಿಲ್ಲ. ಕೈಯಲ್ಲಿ ಪೆನ್ನು ಹಿಡಿದು ಬರೆಯಲು ಆಗುತ್ತಿರಲಿಲ್ಲ. ಆಟ ಆಡಲು ಆಗುತ್ತಿರಲಿಲ್ಲ. ಊಟ ಮಾಡಲೂ ಕೂಡ ಆಗುತ್ತಿರಲಿಲ್ಲ, ನೋಟು ಎಣಿಸಲು ಸಾಧ್ಯವಾಗುತ್ತಿರಲಿಲ್ಲ, ಯಾವುದೇ ಕೆಲಸ ಮಾಡಲು ಸಾಧ್ಯವಾಗುತ್ತಲೇ ಇರಲಿಲ್ಲ. ಘರ್ಷಣೆ ಇಲ್ಲದಿದ್ದರೆ ಊಟ ಮಾಡಲು, ಚಹಾ, ನೀರು ಕುಡಿಯಲೂ ಆಗುತ್ತಿರಲಿಲ್ಲ. ಆಗ ನಾವು ಬದುಕುವುದೂ ಕಷ್ಟವಾಗುತ್ತಿತ್ತು.

ವಸ್ತು/ವಾಹನಗಳು ಸರಾಗವಾಗಿ ಚಲಿಸಲು ಘರ್ಷಣೆ ಅಗತ್ಯ. ಮಳೆಗಾಲದಲ್ಲಿ ಕೆಸರು ರಸ್ತೆಯಲ್ಲಿ ಬಹುತೇಕ ವಾಹನಗಳು ಜಾರಿ ಬೀಳುವುದನ್ನು ನೀವು ನೋಡಿರಬಹುದು. ಆಗ ವಾಹನದ ಚಕ್ರಗಳಿಗೂ ಹಾಗೂ ನೆಲಕ್ಕೂ ನಡುವೆ ಘರ್ಷಣೆ ಇಲ್ಲದ ಕಾರಣ ವಾಹನಗಳು ಜಾರಿ ಬೀಳುತ್ತವೆ. ಎರಡು ವಸ್ತುಗಳು ಪರಸ್ಪರ ಸಂಪರ್ಕಕ್ಕೆ ಬಂದಾಗ ಘರ್ಷಣೆ ಉಂಟಾಗುತ್ತದೆ. ಘರ್ಷಣೆಯು ಚಲನೆಯನ್ನು ನಿಯಂತ್ರಿಸುತ್ತದೆ. ಘರ್ಷಣೆಯು ಯಾವಾಗಲೂ ಚಲಿಸುವ ವಸ್ತುವಿನ ವಿರುದ್ಧ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತದೆ. ಹಾಗಾಗಿ ವಸ್ತುಗಳು ಬೀಳುವುದಿಲ್ಲ. ಕಾಂಕ್ರಿಟ್ ನೆಲಕ್ಕಿಂತ ಮರಳಿನ ನೆಲದ ಮೇಲೆ ಘರ್ಷಣೆ ಹೆಚ್ಚಾಗಿರುತ್ತದೆ. ಆದಕಾರಣ ಮರಳಿನ ನೆಲದ ಮೇಲಿನ ನಡಿಗೆಯ ವೇಗ ಕಡಿಮೆ ಇರುತ್ತದೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ
Scan For Digital Colourful
HAMPI TIMES E-paper

ಘರ್ಷಣೆ ಇಲ್ಲದಿದ್ದರೆ ವಾಹನವೂ ಸಹ ಸ್ಟಾರ್ಟ್ ಆಗುವುದೇ ಇಲ್ಲ. ಒಂದು ವೇಳೆ ಸ್ಟಾರ್ಟ್ ಆದರೂ ವಾಹನದ ವೇಗ ಹೆಚ್ಚು ಅಥವಾ ಕಡಿಮೆ ಮಾಡಲು ಸಹ ಆಗುತ್ತಿರಲಿಲ್ಲ. ಗೇರ್ ಬದಲಿಸಲು ಆಗುತ್ತಿರಲಿಲ್ಲ.



## ಏನಾಗುತ್ತೆ ಗುರು?

ಒಂದೇ ವೇಗದಲ್ಲಿ ವಾಹನವು ನಿಲ್ಲದೇ ಓಡುತ್ತಲೇ ಇರುತ್ತಿತ್ತು. ಘರ್ಷಣೆ ಇಲ್ಲದಿದ್ದರೆ ಆಕಾಶದಲ್ಲಿ ವಿಮಾನ ಹಾರಾಟ ತೊಂದರೆಯಾಗುತ್ತಿತ್ತು. ಮೇಲೇರಿದ ವಿಮಾನಗಳು ಕೆಳಗಿಳಿಯಲು ಸಾಧ್ಯವಾಗುತ್ತಲೇ ಇರಲಿಲ್ಲ. ಘರ್ಷಣೆ ಇಲ್ಲದಿದ್ದರೆ ಭೂಮಿಯ ಮೇಲೆ ಯಾವುದೇ ಕಟ್ಟಡಗಳನ್ನು ಕಟ್ಟಲಾಗುತಿರಲಿಲ್ಲ. ಘರ್ಷಣೆ ಇಲ್ಲದಿದ್ದರೆ ನಾವು ಒಂದೆಡೆ ಕೂರಲು, ನಿಲ್ಲಲು ಆಗುತ್ತಿಲಿಲ್ಲ. ಗಾಳಿಯಲ್ಲಿ ತೇಲಾಡುತ್ತ ಇರಬೇಕಾಗುತ್ತಿತ್ತು. ಅಂತರಿಕ್ಷದಲ್ಲಿ ಘರ್ಷಣೆ ಶೂನ್ಯವಾಗಿರುತ್ತದೆ. ಅಲ್ಲಿ ಮಾನವ ಸೇರಿದಂತೆ ಎಲ್ಲಾ ವಸ್ತುಗಳೂ ಸದಾ ತೇಲಾಡುತ್ತ ಇರುತ್ತವೆ.

ಘರ್ಷಣೆಯಲ್ಲಿ ಸ್ಥಿರ ಘರ್ಷಣೆ, ಉರುಳು ಘರ್ಷಣೆ ಮತ್ತು ಪ್ರಚ್ಛನ್ನ ಘರ್ಷಣೆ ಎಂಬ ಮೂರು ವಿಧಗಳಿವೆ. ವಿದ್ಯುತ್ ಕಂಬ, ಧ್ವಜಕಂಬ, ಕಟ್ಟಡಗಳು ಇವೆಲ್ಲವೂ ಒಂದೆಡೆ ಸ್ಥಿರವಾಗಿರುತ್ತವೆ. ಸ್ಥಿರ ಘರ್ಷಣೆಯ ಕಾರಣದಿಂದ ಇವು ಯಾವಾಗಲೂ ಇದ್ದಲ್ಲೇ ಇರುತ್ತವೆ. ಕೆಲವು ವಸ್ತುಗಳು ಉರುಳುವಾಗ ಘರ್ಷಣೆ ಪಡೆಯುತ್ತವೆ. ಗೋಲಿಯು ಉರುಳು ಘರ್ಷಣೆಯ ಕಾರಣದಿಂದ ಚಲಿಸುತ್ತದೆ. ಹಾಗೆಯೇ ವಾಹನಗಳೂ ಸಹ ಉರುಳು ಘರ್ಷಣೆಯ ಕಾರಣದಿಂದ ಒಂದೆಡೆಯಿಂದ ಇನ್ನೊಂದೆಡೆ ಚಲಿಸುತ್ತವೆ. ಪರಸ್ಪರ ಸಂಪರ್ಕಕ್ಕೆ ಒಳಗಾದ ಎರಡೂ ವಸ್ತುಗಳು ಚಲನೆಯಲ್ಲಿದ್ದಾಗ ಪ್ರಚ್ಛನ್ನ ಘರ್ಷಣೆ ಉಂಟಾಗುತ್ತದೆ. ವಿಮಾನ ಚಲಿಸುವ ವೇಳೆ ಗಾಳಿ ಮತ್ತು ವಿಮಾನಗಳು ಪರಸ್ಪರ ಚಲನೆಯಲ್ಲಿರುತ್ತವೆ. ಆಗ ಪ್ರಚ್ಛನ್ನ ಘರ್ಷಣೆ ಉಂಟಾಗುತ್ತದೆ.

ಘರ್ಷಣೆ ಇಲ್ಲದಿದ್ದರೆ ಬೆಂಕಿಕಡ್ಡಿಯಿಂದ ಬೆಂಕಿ ಹೊತ್ತಿಸಲು ಆಗುತ್ತಿರಲಿಲ್ಲ. ಘರ್ಷಣೆ ಇಲ್ಲದಿದ್ದರೆ ಸಸ್ಯಗಳು, ಮರಗಳು ಮೇಲ್ಮುಖವಾಗಿ ಬೆಳೆಯಲು ಆಗುತ್ತಿರಲಿಲ್ಲ. ಸಸ್ಯಗಳು, ಮರಗಳು ಇಲ್ಲದೇ ಆಮ್ಲಜನಕ ಹಾಗೂ ಜೀವಿಗಳಿಗೆ ಬೇಕಾದ ಆಹಾರ ಉತ್ಪಾದನೆ ಇರುತ್ತಿರಲಿಲ್ಲ. ಆಗ ಜೀವಿಗಳ ಜೀವನ ಕಷ್ಟವಾಗುತ್ತಿತ್ತು. ಮಣ್ಣು ಬೇರುಗಳ ನಡುವೆ ಘರ್ಷಣೆ ಇರುವುದರಿಂದ ಮಣ್ಣು ಬೇರುಗಳನ್ನು ಹಿಡಿದಿಟ್ಟುಕೊಂಡಿದೆ. ಹಾಗಾಗಿ ಮರಗಳು ಮೇಲ್ಮುಖವಾಗಿ ನಿಂತುಕೊಂಡಿವೆ.

ಘರ್ಷಣೆ ಇಲ್ಲದಿದ್ದರೆ ವಾಹನಗಳ ಸವಕಳಿ ಕಡಿಮೆಯಾಗುತ್ತಿತ್ತು. ಇದರಿಂದ ಅವುಗಳ ಕಾರ್ಯಕ್ಷಮತೆ ಹೆಚ್ಚುತ್ತಿತ್ತು. ವಾಹನಗಳಲ್ಲಿ ಉಂಟಾಗುವ ಘರ್ಷಣೆಯನ್ನು ಕಡಿಮೆ ಮಾಡಲು ಅವುಗಳ ಬಿಡಿಭಾಗಗಳಿಗೆ ಆಗಾಗ ಎಣ್ಣೆ ಅಥವಾ ಗ್ರೀಸ್ ಬಳಸುವುದನ್ನು ಗಮನಿಸಿದ್ದೇವೆ. ಏನೇ ಆಗಲಿ ಘರ್ಷಣೆಯಿಂದ ಒಂದಿಷ್ಟು ಅನುಕೂಲಗಳಿರುವಂತೆ ಅನಾನುಕೂಲಗಳು ಇವೆ. ಇದಿಷ್ಟನ್ನು ಕೇಳುತ್ತ ಕುಳಿತಿದ್ದ ಉಷ ಮತ್ತು ಪವನ ಅಡುಗೆ ಮನೆಯಲ್ಲಿ ಜಾರಿಬಿದ್ದ ತಟ್ಟೆಯ ಸದ್ದಿಗೆ ಅತ್ತ ನಡೆದರು. ಈಗ ನಿಮ್ಮ ಸರದಿ.

# ಕಲ್ಕಿ ಕಾಲದ ಮಕ್ಕಳನ್ನು ಪಾಲಕರು ಹೀಗೆ ಬೆಳೆಸಿ

ಮನೆಯೇ ಮೊದಲ ಪಾಠಶಾಲೆ, ಜನನಿಯೇ ಮೊದಲ ಗುರು " ಎಂಬ ಮಾತಿನಂತೆ,ಮಕ್ಕಳ ಭವಿಷ್ಯ ಹೇಗಿರುತ್ತದೆ ಎನ್ನುವುದು ಮನೆಯಲ್ಲಿಯೇ ನಿರ್ಧಾರವಾಗುವುದು. ಏಕೆಂದರೆ, ಮಕ್ಕಳು ತಮ್ಮ ಪೋಷಕರಿಂದಲೇ ಎಲ್ಲವನ್ನು ಕಲಿಯುವರು. ಹೀಗಾಗಿ ಮಕ್ಕಳಿಗೆ ಜೀವನದ ಕೆಲವೊಂದು ಪಾಠಗಳನ್ನು ಕಲಿಸಿಕೊಡುವುದು ಅಗತ್ಯ. "ಬೆಳೆಯುವ ಸಿರಿ, ಮೊಳಕೆಯಲ್ಲಿ " ಎನ್ನುವಂತೆ ಸಣ್ಣ ವಯಸ್ಸಿನಲ್ಲಿಯೇ ತಮ್ಮ ಮಕ್ಕಳಿಗೆ ಇತರರಿಗೆ ಗೌರವ ಕೊಡುವುದನ್ನು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದನ್ನು, ಸಂಯಮದಿಂದ ನಡೆದುಕೊಳ್ಳುವುದನ್ನು ಇತ್ಯಾದಿ ಗುಣಗಳನ್ನು ಕಲಿಸಬೇಕು.

ಮಕ್ಕಳ ಭವಿಷ್ಯ ರೂಪಿಸುವಲ್ಲಿ ತಂದೆ ತಾಯಿಯ ಪಾತ್ರ ಬಹಳ ಮಹತ್ವದ್ದು. ಹೇಗೆಂದರೆ, 'ತಾಯಿಯಾದವಳು ತನ್ನ ಮಗುವನ್ನು ಈ ಜಗತ್ತಿಗೆ ಪರಿಚಯಿಸಿದರೆ, ತಂದೆಯಾದವನು ಇಡೀ ಜಗತ್ತನ್ನು ತನ್ನ ಮಗನಿಗೆ ಪರಿಚಯಿಸುತ್ತಾನೆ'. ಮಾತ್ರವಲ್ಲದೇ ಅವರು ಯಾವ ರೀತಿಯಲ್ಲಿ ಮಗುವಿನ ಭವಿಷ್ಯಕ್ಕಾಗಿ ತಮ್ಮನ್ನು ಮುಡುಪಾಗಿಟ್ಟುಕೊಳ್ಳುವರು ಎನ್ನುವುದರ ಮೇಲೆ ಎಲ್ಲವೂ ನಿರ್ಧಾರಿತ ವಾಗಿರುವುದು.



ರಮೇಶ. ಎಸ್. ಬಿರಾದಾರ
ಶಿಕ್ಷಕರು, ಮೂಡಲಗಿ ಬೆಳಗಾವಿ
Scan For Digital Colourful
HAMPI TIMES E-paper

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ, ಶಿಸ್ತು ಹಾಗೂ ಸಂಸ್ಕೃತಿಯನ್ನು ಕಲಿಸಿಕೊಡುವುದು ಅತಿ ಅಗತ್ಯ. ಮಕ್ಕಳಲ್ಲಿ ಒಳ್ಳೆಯ ವಿದ್ಯಾಭ್ಯಾ ಸವಿದ್ದು, ಶಿಸ್ತು ಹಾಗೂ ಸಂಸ್ಕಾ ರ ಇಲ್ಲದೆ ಇದ್ದರೆ ಅದು ಅಪ್ರಯೋಜಕ. ಅದಕ್ಕೆ ತಿಳಿದವರು ಹೇಳುವ ಪ್ರಕಾರ "ಶಿಕ್ಷಣ ಮತ್ತು ಸಂಸ್ಕಾರ ಬದುಕಿನ ಎರಡು ಮೂಲ ಮಂತ್ರ. ಶಿಕ್ಷಣ ಒಬ್ಬ ವ್ಯಕ್ತಿಯನ್ನು ಈ ಸಮಾಜದಲ್ಲಿ ಯಾವತ್ತಿಗೂ ಎಡವಲು ಬಿಡುವುದಿಲ್ಲ. ಸಂಸ್ಕಾರ ಒಬ್ಬ ವ್ಯಕ್ತಿಯನ್ನು ಈ ಸಮಾಜದಲ್ಲಿ ಕೆಡಲು ಅಂದರೆ ಹಾಳಾಗಲು ಬಿಡುವುದಿಲ್ಲ, ಎಂಬುವುದು ನೂರಕ್ಕೆ ನೂರರಷ್ಟು ಸತ್ಯ...! ಈ ಕಲಿಯುಗದ ಸಮಾಜದಲ್ಲಿ ತಂದೆ ತಾಯಂದಿರು ದಿನವಿಡಿ ಮಕ್ಕಳ ಭವಿಷ್ಯವನ್ನು ರೂಪಿಸುವ ಜವಾಬ್ದಾರಿಯನ್ನು ಹೊ ರಲೇಬೇಕಾಗಿದೆ..! 'ಮಕ್ಕಳಿಗೆ ಎರಡು ಅಕ್ಷರ ಕಡಿಮೆ ಕಲಿಸಿದರು ಪರವಾಗಿಲ್ಲ, ಆದರೆ ಸಂಸ್ಕಾರವನ್ನು ಕಲಿಸಲೇಬೇಕು'. ಇದರ ಜೊತೆಗೆ ಯಾವುದೇ ಸಮಸ್ಯೆಗಳು ಎದುರಾದಾಗ ಎದೆಗುಂದದೆ ಧೈರ್ಯದಿಂದ, ಸೃಜನಶೀಲತೆಯಿಂದ ಯೋಚಿಸಿ, ಸ್ವತಂತ್ರವಾಗಿ, ಆತ್ಮವಿಶ್ವಾಸದಿಂದ ವರ್ತಿಸುವುದು, ಮಕ್ಕಳಲ್ಲಿ ಇರಬೇಕಾದ ಪ್ರಮುಖ ಗುಣಗಳು. ಇದನ್ನು ಪೋಷಕರು ಮಕ್ಕಳಿಗೆ ಮೊದಲಿನಿಂದಲೂ (ಅಂದರೆ ಚಿಕ್ಕ ವಯಸ್ಸಿನಿಂದಲೂ) ಕೂಡ ಹೇಳಿಕೊಡಬೇಕು. ಮಕ್ಕಳಿಗೆ ಅದು ಯಾವುದೇ ವಿಷಯವಾಗಲಿ ಅದು ಶಾಲೆಯಲ್ಲಿ ಆಟ ಅಥವಾ ಪಾಠದ ವಿಚಾರವಾಗಿರಲಿ ಅವರಿಗೆ ಹಂತ – ಹಂತವಾಗಿ ಸಮಸ್ಯೆಗಳನ್ನು ಪರಿಹರಿಸಲು ಮಾರ್ಗದರ್ಶನ ನೀಡಬೇಕು. ಹಾಗೆಯೇ ಪ್ರತಿಯೊಂದು ಪರಿಹಾರಗಳ ಲಾಭ – ನಷ್ಟಗಳ ಬಗ್ಗೆ ಚರ್ಚಿಸಬೇಕು. 'ಯಥಾ ರಾಜ, ತಥಾ ಪ್ರಜಾ' ಎನ್ನುವಂತೆ ಹೆತ್ತವರು ಹೇಗೆ ಇರುತ್ತಾರೋ ಹಾಗೆಯೇ ಮಕ್ಕಳು ಕೂಡ ವರ್ತಿಸುವರು. ಇಂದಿನ ಅತಿಯಾದ ಒತ್ತಡದ ಜೀವನದಲ್ಲಿ ಸಹಾನುಭೂತಿ ಎನ್ನುವುದೇ ಮಾಯವಾಗುತ್ತಿದೆ. ಇದರಿಂದ ಮಕ್ಕಳಲ್ಲಿ ಸಹಾನುಭೂತಿ ಮೂಡಿಸಿ ಅವರನ್ನು ಒಬ್ಬ ಸೌಜನ್ಯಯುತ ವ್ಯಕ್ತಿಯನ್ನಾಗಿ ಬೆಳೆಸಬೇಕಾಗಿದೆ.




'ಸೋಲೇ ಗೆಲುವಿನ ಸೋಪಾನ' ಎಂಬ ಮಾತಿದೆ, ಅದೇ ರೀತಿಯಾಗಿ ಮಕ್ಕಳು ಸೋತಾಗ ಅವರನ್ನು ಬೈಯುವ ಬದಲು ಪ್ರೋತ್ಸಾಹಿಸಿ ಮತ್ತು ಮುಂದೆ ಕೂಡ ಸೋಲನ್ನು ಮೆಟ್ಟಿ ಗೆಲುವನ್ನು ಪಡೆಯಬಹುದು. ಸೋಲಿನಿಂದ ಬಹಳಷ್ಟು ಕಲಿಯಬಹುದು ಎಂಬ ಅರಿವು ಮತ್ತು ಜೀವನದಲ್ಲಿ ಸೋಲು ಹಾಗೂ ಗೆಲುವು ಎರಡು ಇರುವುದು ಎಂಬುದನ್ನು ಅವರಿಗೆ ತಿಳಿಸಬೇಕಾಗಿದೆ.

ಅದಲ್ಲದೆ ಮಕ್ಕಳು ಜವಾಬ್ದಾರಿಯನ್ನು ತೆಗೆದುಕೊಳ್ಳಲು ಪ್ರೋತ್ಸಾಹ ನೀಡಬೇಕು ಮತ್ತು ಇದರ ಪರಿಣಾಮವನ್ನು ಅರ್ಥ ಮಾಡಿಕೊಳ್ಳುವುದನ್ನು ಹಾಗೂ ಅವರ ಆಲೋಚನೆಗಳ ಆಯ್ಕೆ ಹೇಗೆ ಮಾಡಬೇಕು ಎಂಬುದರ ತಿಳಿ ಹೇಳಬೇಕಾಗಿದೆ.

ಇಂದಿನ ಮಕ್ಕಳಿಗೆ ಶ್ರಮ ಕಷ್ಟವೆಂದರೇನೆ ಏನೆಂದು ಗೊತ್ತಿಲ್ಲ. ತಂದೆ–ತಾಯಿ ತಾವು ಕಷ್ಟ ಪಡುತ್ತಾರೆ, ಆದರೆ ತಾವು ಪಟ್ಟ ಕಷ್ಟ ತಮ್ಮ ಮಕ್ಕಳು ಪಡಬಾರದೆಂದು ಹಗಲಿರುಳು ಶ್ರಮಿಸುತ್ತಾರೆ. ಆದರೆ ಮಕ್ಕಳು ತಾವು ಎಲ್ಲ ಸಮಸ್ಯೆ ಪರಿಸ್ಥಿತಿಯನ್ನು ಎದುರಿಸುವ ಛಲ ಹೊಂದಲು ಸಕ್ಷಮರಾಗಲು ಶ್ರಮ, ಕಷ್ಟದ ಅರಿವು ಹೊಂದುವುದು ಅವಶ್ಯಕ. ಆಗ ಅವರಿಗೆ ತಮ್ಮ ಪಾಲಕರ ದುಡಿಮೆಯ ಶ್ರಮದ ಬೆಲೆ ಗೊತ್ತಾಗುತ್ತದೆ. 'ಕೈ ಕೆಸರಾದರೆ ಬಾಯಿ ಮೊಸರು' ಎಂಬುದನ್ನು ತಿಳಿಸಿ ಕಠಿಣ ಪರಿಶ್ರಮಕ್ಕಿಂತ ಮಿಗಿಲಾಗಿರುವುದು ಯಾವುದು ಇಲ್ಲ, ಎನ್ನುವುದನ್ನು ಮಕ್ಕಳಿಗೆ ಹೇಳಿಕೊಡಬೇಕು.

'ಮಾತು ಬೆಳ್ಳಿ ಮೌನ ಬಂಗಾರ' ಎಂಬುದನ್ನು ಅರಿತು, ಎಷ್ಟು ತಾಳ್ಮೆಯಿಂದ ಇರುತ್ತಿವೋ ಅಷ್ಟು ಅಗ್ರಸ್ಥಾನ. ಎಷ್ಟು ದೂರ ಇರುತ್ತೀವೋ ಅಷ್ಟು ಗೌರವ. ಎಷ್ಟು ಕಡಿಮೆ ಆಸೆ ಪಡುತ್ತೀವೋ ಅಷ್ಟು ಪ್ರಶಾಂತತೆ. ಎಷ್ಟು ಕಡಿಮೆ ಮಾತನಾಡುತ್ತೀವೋ ಅಷ್ಟು ಬೆಲೆ, ಎಂಬೆಲ್ಲವನ್ನು ಅವರಿಗೆ ತಿಳಿಸಿ ಹೇಳಿದರೆ ಅವರು ಮುಂದೆ ಈ ಭವ್ಯ ಸಮಾಜದಲ್ಲಿ ಗೌರವಯುತ ಸ್ಥಾನದಲ್ಲಿ ನಿಲ್ಲುತ್ತಾರೆ ನೋಡಿ....!!!

"ವಿದ್ಯೆಗಿಂತ ಬೇರೆ ಐಶ್ವರ್ಯವಿಲ್ಲ. ನಿರ್ಮಲ ಸ್ವಭಾವಕ್ಕಿಂತ ಬೇರೆ ತೀರ್ಥಸ್ನಾನವಿಲ್ಲ".

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಸ್ನೇಹ ಸಿಂಚನ

ಸ್ನೇಹಿತರ ಸ್ನೇಹ ಸಿಂಚನ
ಬದುಕಿಗೆ ನೀಡುವುದು ಚೇತನ
ಭರವಸೆಯ ಮಾತಿನ ಹಿತವಚನ
ಬಿಡಿಸಲು ಆಗದ ಬಂಧನ

ಕಷ್ಟಕೆ ಎಂದಿಗೂ ಜೊತೆಯಾಗಿ
ನಗುವನು ಹರಿಸುತ ಜೋರಾಗಿ
ಸಲುಗೆಯಲಿ ಗದರಿಸುತ ಹಿತವಾಗಿ
ಎಂದಿಗೂ ನಿಲ್ಲುವರು ಗೆಲುವಾಗಿ

ಸ್ನೇಹಿತರಿರದ ಬಾಳು ಬಾಳಲ್ಲ
ಅವರಿದ್ದರೆ ಪ್ರೀತಿಗೆ ಕೊನೆಯಿಲ್ಲ
ಬಂಧುಗಳಿಗೂ ಮಿಗಿಲು ಅವರೆಲ್ಲ
ಸ್ನೇಹಕೆ ಎಂದೂ ಸೋಲಿಲ್ಲ

**– ಚೇತನ ಭಾರ್ಗವ, ಬೆಂಗಳೂರು**

## ಲಿಂ.ಮರುಳಸಿದ್ಧ ಶ್ರೀಗಳ 13ನೇ ಪುಣ್ಯ ಸಂಸ್ಮರಣೋತ್ಸವ ಮೆರವಣಿಗೆ ಅದ್ದೂರಿ

# ಇಂದು ಮರುಳಸಿದ್ದೇಶ್ವರಸ್ವಾಮಿ ಕಾರ್ತಿಕೋತ್ಸವ

■ **ಹಂಪಿ ಟೈಮ್ಸ್ ಕೊಟ್ಟೂರು.**

ಶ್ರೀ ಉಜ್ಜಯನಿ ಸದ್ಧರ್ಮಸಿಂಹಾಸನಾಧೀಶ್ವರ ಲಿಂಗೈಕ್ಯ ಮರುಳಸಿದ್ಧ ಶಿವಾಚಾರ್ಯ ಭಗವತ್ಪಾದರ 13ನೇ ವರ್ಷದ ಪುಣ್ಯ ಸಂಸ್ಮರಣೋತ್ಸವ ಕಾರ್ಯಕ್ರಮದ ಅಂಗವಾಗಿ ಅವರ ಭಾವಚಿತ್ರದ ಮೆರವಣಿಗೆಯು ಶುಕ್ರವಾರ ಉಜ್ಜಿನಿ ಗ್ರಾಮದಲ್ಲಿ ಶ್ರೀಸ್ವಾಮಿಯ ಸದ್ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಶ್ರೀಮದ್ ಉಜ್ಜಯನಿ ಸದ್ಧರ್ಮ ಪೀಠದ ಜಗದ್ಗುರು ಸಿದ್ದಲಿಂಗರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಲಿಂಗೈಕ್ಯ ಮರುಳಸಿದ್ಧರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು.

ಡಿ.14 ರಂದು ಶನಿವಾರ ಸಂಜೆ ಕ್ಷೇತ್ರನಾಥ ಮರುಳಸಿದ್ದೇಶ್ವರ ಸ್ವಾಮಿ ಕಾರ್ತಿಕೋತ್ಸವ ನಿಮಿತ್ತ ಲಕ್ಷ ದೀಪೋತ್ಸವ ನಡೆಯಲಿದ್ದು ನಾಡಿನ ಸಕಲ ಭಕ್ತಾಧಿಗಳು ಆಗಮಿಸಿ ಲಕ್ಷ ದೀಪೋತ್ಸವವನ್ನು ಕಣ್ತುಂಬಿಕೊಳ್ಳುವ ಮೂಲಕ ಶ್ರೀಸ್ವಾಮಿಯ ಕೃಪೆಗೆ



ಪಾತ್ರರಾಗಭೇಕೆಂದರು.

ಶ್ರೀ ಪೀಠದಲ್ಲಿ ಸಾಮೂಹಿಕ ವಿವಾಹ ಹಾಗೂ ಧರ್ಮಸಭೆ ಕೂಡಾ ಜರುಗಲಿದ್ದು, ಧರ್ಮಸಭೆಗೆ ಆಗಮಿಸಿ ವಿವಿದ ಮಠಾಧೀಶರರ ಧರ್ಮೋಪದೇಶ ಹಾಗೂ ಜಗದ್ಗುರುಗಳ ಆಶೀರ್ವಚನ ಕೇಳಿ, ತನು, ಮನವನ್ನು ಶುದ್ಧೀಕರಿಸಿಕೊಂಡು ಸಮಾಜದಲ್ಲಿ ಸನ್ಮಾರ್ಗದಲ್ಲಿ ನಡೆದು ಸಾಮಾಜಿಕ ವ್ಯಕ್ತಿತ್ವನ್ನು ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

# ಕ್ಷಯದ ಬಗ್ಗೆ ನಿರ್ಲಕ್ಷ್ಯ ಬೇಡ ಚಿಕಿತ್ಸೆಯಿಂದ ಗುಣಮುಖ

## ಸಾಧ್ಯಕ್ಷಯ ರೋಗ ಸಂದರ್ಶಕ ಕಾಸಿಮ್



■ **ಹಂಪಿ ಟೈಮ್ಸ್ ಹೊಸಪೇಟೆ**

ಕ್ಷಯ ರೋಗದ ಬಗ್ಗೆ ಉದಾಸೀನ ಮಾಡದೇ ಸ್ಥಳೀಯ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಕಫ ಪರೀಕ್ಷೆ ಮಾಡಿಸಿ ಅಗತ್ಯವಿದ್ದರೇ ಚಿಕಿತ್ಸೆ ಮೂಲಕ ಗುಣಮುಖರಾಗಬೇಕು ಎಂದು ಕ್ಷಯ ರೋಗ ಸಂದರ್ಶಕ ಕಾಸೀಮ್ ಹೇಳಿದರು.

ನಗರದ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಅರೋಗ್ಯಧಿಕಾರಿಗಳ ಕಚೇರಿ ಹಾಗೂ ನಗರ ಅರೋಗ್ಯ ಕೇಂದ್ರ ಸಹಯೋಗದಲ್ಲಿ ರಾಣಿಪೇಟೆಯಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ಕ್ಷಯ ರೋಗ ಅರಿವು ಮೂಡಿಸುವ ಜನಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. 2025 ರ ವೇಳೆಗೆ ಕ್ಷಯಮುಕ್ತ ಭಾರತ ನಿರ್ಮಾಣ ಮಾಡಲು ಕೇಂದ್ರ ಸರ್ಕಾರ ಗುರಿ ಹೊಂದಿದ್ದು, ಈ ನಿಟ್ಟಿನಲ್ಲಿ ಇಲಾಖೆಯೊಂದಿಗೆ ಸಾರ್ವಜನಿಕರ ಸಹಭಾಗಿತ್ವದಲ್ಲಿ ಸಾಮಾಜಿಕವಾಗಿ ಕ್ಷಯರೋಗದ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ. ಕ್ಷಯರೋಗದ ಲಕ್ಷಣಗಳು ಕಂಡು ಬಂದರೆ, ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಕಫ ಪರೀಕ್ಷೆ ಮಾಡಿಸಿಕೊಳ್ಳಬಹುದು ಎಂದರು.

ಬಳಿಕ ಅರೋಗ್ಯ ನಿರೀಕ್ಷಣಾಧಿಕಾರಿ ಅಶ್ವಿನಿ ಬಾಬು ಮಾತನಾಡಿ, ಕ್ಷಯರೋಗದ ಲಕ್ಷಣಗಳು ಪ್ರಮುಖವಾಗಿ ಯಾವುದೇ ವ್ಯಕ್ತಿಯಲ್ಲಿ ಎರಡು ವಾರಕ್ಕಿಂತ ಹೆಚ್ಚು ಕೆಮ್ಮು. ಕಫದಲ್ಲಿ ರಕ್ತ ಬೀಳುವುದು. ಕ್ರಮೇಣ ದೇಹದ ತೂಕ ಕಡಿಮೆ ಆಗುವುದು. ಹಸಿವು ಆಗದೇ ಇರುವುದು, ರಾತ್ರಿ ವೇಳೆ ಬೆವರುವುದು, ಎದೆಯಲ್ಲಿ ನೋವುಂಟು ಆಗುವುದು, ಸಂಜೆ ವೇಳೆಯಲ್ಲಿ ಜ್ವರ ಬರುವುದು. ಕಂಕುಳ ಭಾಗದಲ್ಲಿ, ಗಂಟಲಲ್ಲಿ ಗಡ್ಡೆ ಕಂಡುಬಂದರೆ ಹಾಗೂ ಸಕ್ಕರೆ ಕಾಯಿಲೆ, ಅಧಿಕ ರಕ್ತದೊತ್ತಡ, ಧೂಮಪಾನಿಗಳಲ್ಲಿ ಇಂತಹ ಲಕ್ಷಣಗಳು ಕಂಡು ಬಂದರೆ ಪರೀಕ್ಷೆಗೆ ನಿರ್ಲಕ್ಷಿಸದೇ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಕಫ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕ್ಷಯ ಅಂತ ದೃಢಪಟ್ಟರೆ ಆಪ್ತ ಸಮಾಲೋಚನೆ ಮಾಡಿ ಉಚಿತವಾಗಿ ಮಾತ್ರೆ ನೀಡುವ ಜತೆಗೆ ನಿಕ್ಷಯ ಪೋಷಣ್ ಯೋಜನೆಯಡಿಯಲ್ಲಿ ಪೌಷ್ಟಿಕ ಆಹಾರ ಸೇವನೆಗಾಗಿ ಪ್ರತಿ ತಿಂಗಳು ಒಂದು ಸಾವಿರ ರೂಗಳಂತೆ ಆರು ತಿಂಗಳವರೆಗೆ ರೋಗಿಗಳ ಖಾತೆಗೆ ಪಾವತಿಸಲಾಗುವುದು ಎಂದು ಮಾಹಿತಿ ನೀಡಿದರು. ಈ ವೇಳೆ ಅಂಗನವಾಡಿ ಕಾರ್ಯಕರ್ತೆ ಲಕ್ಷ್ಮಿ, ಆಶಾ ಕಾರ್ಯಕರ್ತರಾದ ಗೌರಮ್ಮ, ಶ್ವೇತಾ, ಪದ್ಮಾವತಿ ಇತರರಿದ್ದರು.

## ಸುತ್ತ ಮುತ್ತ

### ಕುಂದು-ಕೊರತೆ

**********

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ?

ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು

ಹಂಪಿ ಟೈಮ್ಸ್ ದಿನಪತ್ರಿಕೆ

**9448633038**

ವಾಟ್ಸಪ್ ನಂಬರ್ ಗೆ ಕಳುಹಿಸಿ.

# ಗ್ರಾಮ ಪಂಚಾಯತ್‌ಗಳ ವಿದ್ಯುತ್ ಶುಲ್ಕ ತೀರುವಳಿ, ಬಡ್ಡಿ ಮನ್ನಾ

## 5,257.70 ಕೋಟಿ ರೂ ತೀರುವಳಿ | ರೂ.1,252.20 ಕೋಟಿ ಬಡ್ಡಿ ಬನ್ನ: ಸಚಿವ ಪ್ರಿಯಾಂಕ್ ಖರ್ಗೆ

■ **ಬೆಳಗಾವಿ ಸುವರ್ಣಸೌಧ**

ರಾಜ್ಯದ ಗ್ರಾಮ ಪಂಚಾಯತ್‌ಗಳು ಏಪ್ರಿಲ್ 2015 ರಿಂದ ಮಾರ್ಚ್ 2023 ರ ವರೆಗೆ ವಿದ್ಯುತ್ ಸರಬರಾಜು ಕಂಪೆನಿಗಳಿಗೆ ಪಾವತಿಸಬೇಕಾಗಿರುವ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ಬಾಕಿ ವಿದ್ಯುತ್ ಶುಲ್ಕದ ಒಟ್ಟು ಮೊತ್ತ ರೂ.6,509,90 ಕೋಟಿಗಳಲ್ಲಿ ಅಸಲು ಮೊತ್ತ ರೂ.5,257.70 ಕೋಟಿಗಳನ್ನು ಸರ್ಕಾರದ ಖಾತರೀಕರಣ ಮೂಲಕ ತೀರುವಳಿ ಮಾಡಿ ಹಾಗೂ ಬಡ್ಡಿ ಮೊತ್ತ ರೂ.1,252.20 ಕೋಟಿ ಗಳನ್ನು ಮನ್ನಾ ಮಾಡಿ ಆದೇಶ ಹೊರಡಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಅವರು ಇಂದು ವಿಧಾನ ಪರಿಷತ್ತಿನಲ್ಲಿ ಸದಸ್ಯ ಡಾ.ತಿಮ್ಮಯ್ಯ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದರು.

ಎಪ್ರಿಲ್ 2023 ರಿಂದ ಸೆಪ್ಟೆಂಬರ್ 2024 ರ ವರೆಗೆ ಗ್ರಾಮ ಪಂಚಾಯತಿಗಳ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ವಿದ್ಯುತ್ ಶುಲ್ಕದ ಒಟ್ಟು ಮೊತ್ತ ರೂ.3,719.20 ಕೋಟಿಗಳು ಬಾಕಿ ಇರುತ್ತದೆ. ಈ ಮೊತ್ತದಲ್ಲಿ ಅಸಲು ಮೊತ್ತ ರೂ.2,749.54 ಕೋಟಿಗಳು ಮತ್ತು ಬಡ್ಡಿ ಮೊತ್ತ ರೂ.969.66 ಕೋಟಿಗಳು ಒಳಗೊಂಡಿದ್ದು, ಸದರಿ ಮೊತ್ತವನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸ ಬೇಕಾಗಿರುತ್ತದೆ.

ಗ್ರಾಮ ಪಂಚಾಯತಿಗಳಿಗೆ ರಾಜ್ಯ ಹಣಕಾಸು ಆಯೋಗದ ಅಭಿವೃದ್ಧಿ ಅನುದಾನ / ಗ್ರಾಮ ಪಂಚಾಯತಿಗಳಿಗೆ ಸಹಾಯ ಹೆಸರಿನಲ್ಲಿ ಒಟ್ಟು 1202.18 ಕೋಟಿಗಳ ಅನುದಾನವನ್ನು 2024-25 ನೇ ಸಾಲಿನಲ್ಲಿ ಒದಗಿಸಿದ್ದು, ಈ ಪೈಕಿ ರೂ. 391.79 ಕೋಟಿಗಳ ಅನುದಾನವನ್ನು ಗ್ರಾಮ ಪಂಚಾಯತಿಗಳ ವಿದ್ಯುತ್ ಶುಲ್ಕದ ಮೊತ್ತ ಭರಿಸಲು ಬಿಡುಗಡೆ ಮಾಡಲಾಗುತ್ತಿದೆ. ಅಲ್ಲದೆ, ಗ್ರಾಮ ಪಂಚಾಯತಿಗಳು ಸ್ವಂತ ಸಂಪನ್ಮೂಲದಿಂದ ವಿದ್ಯುತ್ ಶುಲ್ಕದ ಮೊತ್ತವನ್ನು ಭರಿಸಬಹುದಾಗಿದೆ ಎಂದರು.

2024-25ನೇ ಸಾಲಿನ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳ ಗೌರವ ಧನಕ್ಕಾಗಿ 273.78 ಕೋಟಿಗಳ ಅನುದಾನ ಒದಗಿಸಲಾಗಿದ್ದು, ಡಿಸೆಂಬರ್ 2024 ರವರೆಗಿನ ಗೌರವಧನವನ್ನು ಬಿಡುಗಡೆ ಮಾಡಲಾಗಿದೆ. ಗ್ರಾಮಾಂತರದಲ್ಲಿರುವ ಪಂಚಾಯತ್ ಗಳಿಗೆ ಅನುದಾನ ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ ಎಂದರು.

# ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ-3

## ಹಂಪಿ ಟೈಮ್ಸ್ ಪತ್ರಿಕೆಯಿಂದ ಪ್ರತಿ ಶುಕ್ರವಾರ ಸ್ಪರ್ಧೆ | ಮಕ್ಕಳಲ್ಲಿ ಹೆಚ್ಚಿದ ಉತ್ಸಾಹ



ಹೊಸಪೇಟೆಯ ಸರ್ಕಾರಿ ಬಾಲಕೀಯರ ಪ್ರೌಢಶಾಲೆಯಲ್ಲಿ(ಮಾಪು) ವಿದ್ಯಾರ್ಥಿನಿಯರು ಎಸ್ಸೆಸ್ಸೆಲ್ಸಿ ಪರೀಕ್ಷಾ ಸಿದ್ಧತೆಯ ವಿಜ್ಞಾನ ಚಿತ್ರ ಸ್ಪರ್ಧೆ-3 ರಲ್ಲಿ ಭಾಗವಹಿಸಿ ಚಿತ್ರಬಿಡಿಸಿದರು. ಶಿಕ್ಷಕರು ಇದ್ದರು.



ಹೊಸಪೇಟೆಯ ಚಿತ್ತವಾಡ್ಗಿ ಸರ್ಕಾರಿ ಮುನ್ಸಿಫಲ್ ಹೈಸ್ಕೂಲ್ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷಾ ಸಿದ್ಧತೆಯ ವಿಜ್ಞಾನ ಚಿತ್ರ ಸ್ಪರ್ಧೆ-3 ರಲ್ಲಿ ಭಾಗವಹಿಸಿ ಚಿತ್ರಬಿಡಿಸಿದರು. ಶಿಕ್ಷಕರು ಇದ್ದರು.



ಹೊಸಪೇಟೆಯ ಆನಂತಶಯನಗುಡಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷಾ ಸಿದ್ಧತೆಯ ವಿಜ್ಞಾನ ಚಿತ್ರ ಸ್ಪರ್ಧೆ-3 ರಲ್ಲಿ ಭಾಗವಹಿಸಿ ಚಿತ್ರಬಿಡಿಸಿದರು. ಶಿಕ್ಷಕರು ಇದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

HAMPI TIMES VIJAYANAGARA

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

## ಇತಿಹಾಸ ಅಧ್ಯಾಯ: 19 – ಸ್ವಾತಂತ್ರ್ಯೋತ್ತರ ಭಾರತ

**1) ಭಾರತದ ಕೊನೆಯ ಬ್ರಿಟಿಷ ಗೌರ್ವನರ್ ಜನರಲ್ ಆಗಿದ್ದವರು ಯಾರು?**
ಉತ್ತರ: ಮೌಂಟ್ ಬ್ಯಾಟನ್

**2) ಭಾರತದ ಪ್ರಥಮ ಗೃಹ ಮಂತ್ರಿ/ ಭಾರತದ ಉಕ್ಕಿನ ಮನುಷ್ಯ/ಸಂಸ್ಥಾನಗಳನ್ನು ವಿಲೀನಿಕರಣಗೊಳಿಸಿದವರು ಯಾರು?**
ಉತ್ತರ: ಸರ್ದಾರ್ ವಲ್ಲಭಾಯಿ ಪಟೇಲ್

**3) ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು?**
ಉತ್ತರ: ಡಾ.ಬಾಬು ರಾಜೇಂದ್ರಪ್ರಸಾದ್

**4) ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರು ಯಾರಾಗಿದ್ದರು?**
ಉತ್ತರ: ಫಜಲ್ ಅಲಿ

**5) ರಾಜ್ಯ ಪುನರ್ವಿಂಗಡಣಾ ಕಾನೂನು ಯಾವಾಗ ಜಾರಿಗೆ ಬಂದಿತು ?**
ಉತ್ತರ: 1956 ರಲ್ಲಿ ಜಾರಿಗೆ ಬಂದಿತು

**6) ಗೋವಾ ಯಾವಾಗ ಸ್ವತಂತ್ರಗೊಂಡಿತು?**
ಉತ್ತರ: 1961 ರಲ್ಲಿ ಸ್ವತಂತ್ರಗೊಂಡಿತು

**7) 1956 ರ "ರಾಜ್ಯ ಪುನರ್ವಿಂಗಡಣಾ ಕಾನೂನು" ಪ್ರಕಾರ ಭಾರತದಲ್ಲಿ ರಚನೆಯಾದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳೆಷ್ಟು?**
ಉತ್ತರ: ಭಾರತದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು

**8) ಮೈಸೂರು ರಾಜ್ಯ'ವು ಯಾವಾಗ ಅಸ್ತಿತ್ವಕ್ಕೆ ಬಂದಿತು?**
ಉತ್ತರ: 1956 ನವೆಂಬರ್ 1 ರಂದು ಅಸ್ತಿತ್ವಕ್ಕೆ ಬಂದಿತು

**9) 'ಮೈಸೂರು ರಾಜ್ಯ'ವು 'ಕರ್ನಾಟಕ' ಎಂದು ಯಾವಾಗ ಮರುನಾಮಕರಣಗೊಡಿತು?**
ಉತ್ತರ: 1973 ನವೆಂಬರ್ 1 ರಂದು 'ಕರ್ನಾಟಕ' ಎಂದು ಮರು ನಾಮಕರಣ ಮಾಡಲಾಯಿತು.

**10) ವಲ್ಲಭ ಭಾಯಿ ಪಟೇಲರ 'ಉಕ್ಕಿನ ಮನುಷ್ಯ' ಎಂದು ಏಕೆ ಕರೆಯುತ್ತಾರೆ?**
ಉತ್ತರ: ದೇಶೀಯ ಸಂಸ್ಥಾನಗಳನ್ನು ಯಶಸ್ವಿಯಾಗಿ ವಿಲೀನಗೊಳಿಸಿದರು.

**11) ಸ್ವಾತಂತ್ರ್ಯೋತ್ತರ ಭಾರತದ ಸಮಸ್ಯೆಗಳಾವುವು? (ಜೂನ್ 2022)**
ಉತ್ತರ: 1. ನಿರಾಶ್ರಿತರ ಸಮಸ್ಯೆ, 2. ಕೋಮುಗಲಭೆಗಳು,
3. ಸರ್ಕಾರದ ರಚನೆ, 4. ದೇಶೀಯ ಸಂಸ್ಥಾನಗಳ ವಿಲೀನೀಕರಣ,
5. ಭಾಷಾವಾರು ರಾಜ್ಯಗಳ ರಚನೆ
6. ಆಹಾರದ ಉತ್ಪಾದನೆ, 7. ಕೃಷಿ ಬೆಳವಣಿಗೆ,
8. ಕೈಗಾರಿಕೆಗಳ ಬೆಳವಣಿಗೆ ಇತ್ಯಾದಿ.

**12) ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು? (ಸೆಪ್ಟೆಂಬರ್ 2020)**
ಉತ್ತರ: * ಭಾರತ ವಿಭಜನೆಯಿಂದಾಗಿ ಜನರು ಪಾಕಿಸ್ತಾನಕ್ಕೆ ಮತ್ತು ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಹೋಗಬೇಕಾಯಿತು. * ಈ ನಿರಾಶ್ರಿತ ಜನರಿಗೆ ವಸತಿ, ಉದ್ಯೋಗ, ಭೂಮಿ, ಶಿಕ್ಷಣ, ಆರೋಗ್ಯ, ಸಾಮಾಜಿಕ ವಾತಾವರಣ ಎಲ್ಲವನ್ನೂ ನಿರ್ಮಿಸಿ ಕೊಟ್ಟಿತು.

**13) ವಲ್ಲಭ ಭಾಯಿ ಪಟೇಲರು ದೇಶೀಯ ಸಂಸ್ಥಾನಗಳನ್ನು ಹೇಗೆ ವಿಲೀನಗೊಳಿಸಿದರು?**
ಉತ್ತರ: 1. 1947ರ ವಿಲೀನ ಕಾಯ್ದೆ ಜಾರಿಯಾಯಿತು.
2. 562 ದೇಶೀಯ ಸಂಸ್ಥಾನಗಳಿಗೆ ಭಾರತ ಒಕ್ಕೂಟಕ್ಕೆ ಸೇರಲು ಆಹ್ವಾನಿಸಲಾಯಿತು.3. ಒಕ್ಕೂಟಕ್ಕೆ ಸೇರುವವರಿಗೆ ರಾಜಧನವನ್ನು ನಿಗದಿಪಡಿಸಲಾಯಿತು.
4. ಕೆಲವೊಂದು ಸವಲತ್ತು ಮತ್ತು ಸ್ಥಾನಮಾನಗಳನ್ನು ನೀಡಲಾಯಿತು.

**14) ವಿಲೀನೀಕರಣದಲ್ಲಿ ತೀವ್ರ ಪ್ರತಿರೋಧ ತೋರಿದ ಸಂಸ್ಥಾನಗಳಾವುವು?**
ಉತ್ತರ: 1. ಜುನಾಗಡ್, 2. ಹೈದರಾಬಾದ್ ಮತ್ತು 3. ಜಮ್ಮು ಕಾಶ್ಮೀರ,

**15) ಹೈದರಾಬಾದ್ ಸಂಸ್ಥಾನವನ್ನು 1948ರಲ್ಲಿ ಭಾರತದೊಂದಿಗೆ ಹೇಗೆ ವಿಲೀನಗೊಳಿಸಲಾಯಿತು?**
ಉತ್ತರ: 1. ಹೈದರಾಬಾದ್ ನಿಜಾಮನು ಸ್ವತಂತ್ರವಾಗುಳಿಯಲು ಬಯಸಿದನು. 2. ರೈತರು ಮತ್ತು ಕಮ್ಯುನಿಸ್ಟರು ನಿಜಾಮನ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದರು. 3. ಜನತೆಯ ವಿರುದ್ಧ ನಿಜಾಮನು ರಜಾಕರ ಎಂಬ ಕ್ರೂರ ಪಡೆಯನ್ನು ಬಳಸಿದನು. 4. ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿತು. 5.ಹೈದರಾಬಾದ್ ಸಂಸ್ಥಾನವನ್ನು 1948ರಲ್ಲಿ ಭಾರತದೊಂದಿಗೆ ವಿಲೀನಗೊಳಿಸಿತು.

**16) 1949ರಲ್ಲಿ ಜುನಾಗಢ ಭಾರತ ಒಕ್ಕೂಟಕ್ಕೆ ಹೇಗೆ ಸೇರ್ಪಡೆ ಯಾಯಿತು?(ಏಪ್ರಿಲ್, ಜೂನ್ 2024)**
ಉತ್ತರ: 1. ಜುನಾಗಡ್ ನವಾಬನು ಪಾಕಿಸ್ತಾನಕ್ಕೆ ಸೇರಿಸಲು ಬಯಸಿದನು. 2. ಪ್ರಜೆಗಳು ಆತನನ್ನು ವಿರೋಧಿಸಿದರು. 3. ಆಗ ನವಾಬನು ಪಲಾಯನ ಮಾಡಿದನು. 4. ಅಲ್ಲಿನ ದಿವಾನನ ಮನವಿಯಂತೆ ಭಾರತ ಸೈನ್ಯವನ್ನು ಕಳುಹಿಸಿತು. 5. 1949ರಲ್ಲಿ ಜುನಾಗಢ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

**17) ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ. ವಿಶ್ಲೇಷಿಸಿ. (ಏಪ್ರಿಲ್ 2023)**
ಉತ್ತರ: 1. ಕಾಶ್ಮೀರಿನ ರಾಜ ಹರಿಸಿಂಗ್ ಸ್ವತಂತ್ರವಾಗಿರಲು ಬಯಸಿದನು. 2. ಪಾಕಿಸ್ತಾನವು ಕಾಶ್ಮೀರದ ಮೇಲೆ ದಾಳಿ ಮಾಡಿತು. 3. ಕಾಶ್ಮೀರದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಭಾರತದೊಂದಿಗೆ ಸೇರಲು ಬಯಸಿತು. 4. ಇದರಿಂದ ರಾಜಾ ಹರಿಸಿಂಗನು ಭಾರತದ ಸಹಾಯ ಕೋರಿದನು. 5. ಕಾಶ್ಮೀರ ಕೆಲವು ಷರತ್ತುಗಳೊಂದಿಗೆ ಭಾರತದೊಂದಿಗೆ ವಿಲೀನವಾಯಿತು. 6. ಆದರೆ, ಕಾಶ್ಮೀರದ ಒಂದು ಭಾಗ ಪಾಕಿಸ್ತಾನದ ವಶದಲ್ಲಿ ಉಳಿಯಿತು. 7. ಇದನ್ನು 'ಪಾಕ್ ಆಕ್ರಮಿತ ಪ್ರದೇಶ'ವೆಂದು ಕರೆಯಲಾಗುತ್ತದೆ.

**18). ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು? (ಜೂನ್ 2020, ಜೂನ್ 2023)**
ಉತ್ತರ: 1. ಪೋರ್ಚುಗೀಸರ ವಿರುದ್ಧ ನಿರಂತರವಾದ ಚಳವಳಿ ನಡೆಯಿತು.2. ಪೋರ್ಚುಗೀಸರು ಆಫ್ರಿಕಾ ಮತ್ತು ಯುರೋಪಿನಿಂದ ಹೆಚ್ಚಿನ ಸೈನ್ಯವನ್ನು ತರಿಸಿಕೊಂಡರು.
3. ಚಳವಳಿಯನ್ನು ದಮನ ಮಾಡಲು ಪ್ರಯತ್ನಿಸಿದರು.
4. ಭಾರತದ ಸತ್ಯಾಗ್ರಹಿಗಳು ಗೋವಾ ವಿಮೋಚನಾ ಹೋರಾಟ ಪ್ರಾರಂಭಿಸಿದರು. 5. 1961ರಲ್ಲಿ ಭಾರತದ ಸೈನ್ಯ ಗೋವಾವನ್ನು ವಶಪಡಿಸಿಕೊಂಡಿತು.

"ಇಂದಿನ ಪರಿಶ್ರಮವೇ ನಾಳಿನ ಯಶಸ್ಸು"

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ** ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ:9916567120

ಸಾಯಿಮಣಿ ಪ್ರಕಾಶನ, ಹೊಸಪೇಟೆ

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**14–12–2024 – ಶನಿವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ರೋಹಿಣಿ |
| ಯೋಗ | : ಸಿದ್ಧಿ |
| ಕರಣ | : ವಾಣಿಜ |
| ಸೂರ್ಯೋದಯ | : 07:01:17 |
| ಸೂರ್ಯಾಸ್ತ | : 17:42:19 |
| ರಾಹು ಕಾಲ | : 09:42–11:02 |
| ಯಮಘಂಡ ಕಾಲ | : 13:42–15:02 |
| ಗುಳಿಕ ಕಾಲ | : 07:01–08:21 |



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 13–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.31ಅಡಿ |
| ಒಳ ಹರಿವು | 3909 ಕ್ಯುಸೆಕ್ |
| ಹೊರ ಹರಿವು | 5832 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 91.496 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1591.06 ಅಡಿ |
| ಒಳ ಹರಿವು | 520 ಕ್ಯುಸೆಕ್ |
| ಹೊರ ಹರಿವು | 1786 ಕ್ಯುಸೆಕ್ |
| ಸಾಮರ್ಥ್ಯ | 11.939 ಟಿಎಂಸಿ |

# ಭಕ್ತರಿಂದ ಅಂಜನಾದ್ರಿಯಲ್ಲಿ ಹನುಮಮಾಲ ವಿಸರ್ಜನೆ

# ಭಕ್ತಿಯಲ್ಲಿ ಮಿಂದೆದ್ದ ಹನುಮ ಭಕ್ತರು


## ನಾಡಿನ ವಿವಿದೆಡೆಯಿಂದ ಲಕ್ಷಾಂತರ ಭಕ್ತರು ಆಗಮನ। ಜಿಲ್ಲಾಡಳಿತದಿಂದ ಸಮರ್ಪಕ ಸೌಲಭ್ಯ

**ಹಂಪಿ ಟೈಮ್ಸ್ ಕೊಪ್ಪಳ**

ಆಂಜನೇಯ ಸ್ವಾಮಿ ಜನ್ಮಸ್ಥಳ ಅಂಜನಾದ್ರಿಯಲ್ಲಿ ಹನುಮಮಾಲ ವಿಸರ್ಜನೆ ಕಾರ್ಯಕ್ರಮ ಲಕ್ಷಾಂತರ ಹನುಮ ಮಾಲಾಧಾರಿಗಳಿಂದ ಶುಕ್ರವಾರ ಜರುಗಿತು. ಗುರುವಾರದಿಂದಲೇ ಆರಂಭವಾದ ಹನುಮಮಾಲಾ ವಿಸರ್ಜನೆ ಕಾರ್ಯಕ್ರಮ. ಶುಕ್ರವಾರ ಹೆಚ್ಚಿನ ಸಂಖ್ಯೆಯಲ್ಲಿ ಆಂಜನೇಯ ಸ್ವಾಮಿಯ ಭಕ್ತರು ಆಗಮಿಸಿದ್ದರು.

ಬೆಳಂ ಬೆಳಿಗ್ಗೆ ಎಲ್ಲರೂ ನೀರಿನಲ್ಲಿ ಮಿಂದೆದ್ದು ಜಯಘೋಷಗಳನ್ನು ಕೂಗುತ ಸರತಿ ಸಾಲಿನಲ್ಲಿ ನಿಂತು ಆಂಜನೇಯ ಸ್ವಾಮಿಯ ದರ್ಶನ ಪಡೆಯುತ್ತಿದ್ದದು ಕಂಡು ಬಂತು.

ಕೊಪ್ಪಳ ಜಿಲ್ಲೆ ಮಾತ್ರವಲ್ಲದೆ ಅಕ್ಕ–ಪಕ್ಕದ ಜಿಲ್ಲೆ ಮತ್ತು ಇತರೆ ರಾಜ್ಯಗಳಿಂದಲು ಹನುಮಮಾಲಧಾರಿ ಆಗಮಿಸಿದ್ದರು. ರಸ್ತೆಯಗಳಲ್ಲಿ ಕಾಲ್ನಡಿಗೆ ಮುಖಾಂತರ ತಂಡೋಪ ತಂಡವಾಗಿ ಮತ್ತು ದೂರದ ಊರಿನಿಂದ ಬರುವ ಜನರು ವಾಹನಗಳಲ್ಲಿ ಬರುತ್ತಿರುವುದು ಕಂಡು ಬಂದಿತು. ಈ ಕಾರ್ಯಕ್ರಮಕ್ಕೆ ಬರುವ ಭಕ್ತಾಧಿಗಳಿಗೆ ಯಾವುದೇ ತೊಂದರೆಯಾಗದಂತೆ ಕೊಪ್ಪಳ ಜಿಲ್ಲಾಡಳಿತ ಉತ್ತಮ ರೀತಿಯಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಮಾಡಿತ್ತು. ಭಕ್ತರಿಗೆ ಪ್ರಸಾದಕ್ಕಾಗಿ ವೇದಪಾಠ ಶಾಲೆಯ ಆವರಣದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಹುಗ್ಗಿ, ಅನ್ನ, ಸಾಂಬರ್, ಟೊಮಟೊ ಚಟ್ನಿ ಒಳಗೊಂಡ ಪ್ರಸಾದವನ್ನು ಭಕ್ತರು ಸವಿದರು. ಜನರಿಗೆ ನೂಕು ನುಗ್ಗಲು ಆಗದಂತೆ ಹಲವಾರು ಕೌಂಟರಗಳನ್ನು ತೆರೆದಿದ್ದರಿಂದ ಶಾಂತ ರೀತಿಯಲ್ಲಿ ಪ್ರಸಾದ ಸ್ವೀಕಾರಕ್ಕೆ ಅನುಕೂಲವಾಯಿತು. ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ, ಅಡುಗೆ ಚೆನ್ನಾಗಿ ಆಗಿದೆ ಎಂದು ಭಕ್ತರು ಮಾತನಾಡುತ್ತಿದ್ದರು.



ಟ್ರಾಫಿಕ್ ಸಮಸ್ಯೆಯಾಗದಂತೆ ಮುಂಚಿತವಾಗಿ ಪೊಲೀಸರು ಪಾರ್ಕಿಂಗ್ ಸ್ಥಳ ನಿಗದಿಪಡಿಸಿದರಿಂದ ಯಾವುದೇ ಟ್ರಾಫಿಕ್ ಸಮಸ್ಯೆಗಳಾಗಲಿಲ್ಲ. ಕಾರ್ಯಕ್ರಮ ಸುವ್ಯವಸ್ಥಿತವಾಗಿ ನಡೆಯಲು ರಚಿಸಲಾದ ವಿವಿಧ ಸಮತಿಗಳ ಕೆಲಸ ಕಾರ್ಯಗಳು ಹೇಗೆ ನಡೆಯುತ್ತಿವೆ ಎಂದು ಜಿಲ್ಲಾಧಿಕಾರಿಗಳು ಆಗಾಗ ಪರಿಶೀಲನೆ ನಡೆಸುತ್ತಿದ್ದರು. ವೈದ್ಯಕೀಯ ತಂಡಗಳು. ಪೊಲೀಸ್. ಕಂದಾಯ ಇಲಾಖೆ ಸೇರಿದಂತೆ ಇತರೆ ವಿವಿಧ ಇಲಾಖೆಯ ಅಧಿಕಾರಿಗಳು. ತಮಗೆ ವಹಿಸಿದ ಕೆಲಸಗಳನ್ನು ಜವಾಬ್ದಾರಿಯಿಂದ ನಿಭಾಯಿಸಿದರಿಂದ ಭಕ್ತರಿಗೆ ಯಾವುದೇ ಸಮಸ್ಯೆಗಳಾಗಲಿಲ್ಲ. ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಅದರ ಕೆಳಗಡೆ ಇರುವ ಪಾದಗಟ್ಟೆಯಲ್ಲಿ ಹೂವಿನ ಅಲಂಕಾರ ಕಳೆದ ವರ್ಷಕ್ಕಿಂತಲೂ ಈ ವರ್ಷ ಚೆನ್ನಾಗಿ ಮಾಡಲಾಗಿತ್ತು. ಅಂಜನಾದ್ರಿ ಬೆಟ್ಟಕ್ಕೆ ವಿವಿಧ ಬಣ್ಣಗಳ ಲೈಟಿಂಗ್ ವ್ಯವಸ್ಥೆ ಮಾಡಿದ್ದರಿಂದ ಬೆಟ್ಟವು ರಾತ್ರಿ ಕಂಗೊಳಿಸುತ್ತಿತ್ತು.

ನಡೆದುಕೊಂಡು ಬರುವ ಹನುಮಮಾಲಾಧಾರಿಗಳಿಗೆ ಅನುಕೂಲವಾಗಲು ರಸ್ತೆಗಳ ಮಾರ್ಗ ಮಧ್ಯದ ಅಲ್ಲಲ್ಲಿ ಟೆಂಟ್‌ಗಳನ್ನು ಹೊಡೆದು ವಿಶ್ರಾಂತಿ ಸ್ಥಳಗಳನ್ನು ಮಾಡಲಾಗಿತ್ತು. ಕೆಲವು ಗ್ರಾಮಗಳಲ್ಲಿ ಭಕ್ತರಿಗೆ ಅನ್ನಪ್ರಸಾದ ವ್ಯವಸ್ಥೆ ಮಾಡಿರುವುದು ಮಾರ್ಗಮಧ್ಯದಲ್ಲಿ ಕಂಡು ಬರುತಿತ್ತು. ನಗರಸ್ಥಳೀಯ ಸಂಸ್ಥೆಗಳ ವತಿಯಿಂದ ಎಲ್ಲಾ ಕಡೆ ಸ್ವಚ್ಚತೆ ಕಾಪಡಲು ಹಲವಾರು ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿತ್ತು. ಪೊಲೀಸವರು ವಾಹನ ಗಳನ್ನು ಪಾರ್ಕಿಂಗಗಾಗಿ ನಿಗದಿಪಡಿಸಿದ ಸ್ಥಳಗಳಲ್ಲಿ ವಾಹನಗಳನ್ನು ನಿಲ್ಲಿಸುವಂತೆ ಬರುವ ವಾಹನಗಳಿಗೆ ನಿರ್ದೇಶನ ನೀಡುತ್ತಿದ್ದರು. ಪ್ರಮುಖ ರಸ್ತೆಗಳು, ಅಂಜನಾದ್ರಿಯ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿಗಳನ್ನು ಅಳವಡಿಸಿ ಕಾನೂನು ಸುವ್ಯವಸ್ಥೆ ಕಾಪಾಡಲು ವಿಶೇಷ ನಿಗಾ ವಹಿಸಲಾಗಿತ್ತು.

ಅಂಜನಾದ್ರಿಗೆ ಲಕ್ಷ್ಯಾಂತರ ಸಂಖ್ಯೆಯಲ್ಲಿ ಭಕ್ತರು ಬರುವ ನಿರೀಕ್ಷೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತವು ಎಲ್ಲಾ ರೀತಿಯ ಸೌಕರ್ಯಗಳ ವ್ಯವಸ್ಥೆಯನ್ನು ಕಲ್ಪಿಸಿತ್ತು. ಕುಡಿಯುವ ನೀರು, ಸ್ನಾನಗೃಹಗಳು, ವಾಹನಗಳಿಗೆ ಪಾರ್ಕಿಂಗ್, ಪ್ರಸಾದ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ಸಹಾಯವಾಣಿ, ಅಗತ್ಯ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ನಿಯೋಜನೆ ಸೇರಿದಂತೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಕಲ್ಪಿಸಲಾಗಿದ್ದರಿಂದ ಹನುಮ ಮಾಲಾಧಾರಿಗಳು ಸೇರಿದಂತೆ ಎಲ್ಲರಿಗೂ ಅನುಕೂಲವಾಯಿತು. ಈ ಮೂಲಕ ಡಿಸೆಂಬರ್ 12 ಮತ್ತು ಡಿಸೆಂಬರ್ 13ರಂದು ಎರಡೂ ದಿನಗಳ ಕಾಲ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಜಿಲ್ಲೆಯ ಸಚಿವರು, ಸಂಸದರು, ಶಾಸಕರು ಹಾಗೂ ಇತರೆ ಜನಪ್ರತಿನಿಧಿಗಳ ಸಹಕಾರ ಮತ್ತು ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ರಾಮ್ ಎಲ್ ಅರಸಿದ್ದಿ ಹಾಗೂ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಕೊಪ್ಪಳ ಉಪವಿಭಾಗಾ ಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಹಾಗೂ ಇತರ ಅಧಿಕಾರಿಗಳು ಅಂಜನಾದ್ರಿ ಬೆಟ್ಟಕ್ಕೆ ನಿರಂತರವಾಗಿ ಭೇಟಿ ನೀಡಿ ಅಲ್ಲಿನ ಕೆಲಸ ಕಾರ್ಯಗಳ ಬಗ್ಗೆ ಪರಿಶೀಲಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಯುವಂತೆ ನೋಡಿಕೊಂಡರು.

## ಭೋವಿ ಅಭಿವೃದ್ಧಿ ನಿಗಮದಿಂದ ಉಚಿತ ಪತ್ರಿಕೋದ್ಯಮ ತರಬೇತಿಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಉಚಿತ ಪತ್ರಿಕೋದ್ಯಮ ತರಬೇತಿ ನೀಡಲು ಅರ್ಹ ಭೋವಿ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ ಎಂದು ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಸಿದ್ದಲಿಂಗ ತಿಳಿಸಿದ್ದಾರೆ.

ಪ್ರಸ್ತುತ ಕೇಂದ್ರ ಸರ್ಕಾರವು ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಪ್ರಯೋಗಿಕ ತರಬೇತಿ ಮತ್ತು ಕ್ಷೇತ್ರ ಅನುಭವವನ್ನು ನೀಡಲು ವಸತಿ ಸಹಿತ 60 ದಿನಗಳ ತರಬೇತಿ ನೀಡಲಾಗುತ್ತದೆ. ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಮತ್ತು ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು ಇವರ ಮೂಲಕ ಉಚಿತ ಪತ್ರಿಕೋದ್ಯಮ ತರಬೇತಿ ನೀಡಲಾಗುತ್ತದೆ. ಎಸ್ಸೆಸ್ಸೆಲ್ಸಿ, ಪಿ.ಯು.ಸಿ, ಡಿಪ್ಲೋಮಾ ವಿದ್ಯಾರ್ಹತೆಯನ್ನು ಹೊಂದಿದವರು ಜಿಲ್ಲಾ ಕಚೇರಿಯಿಂದ ಅರ್ಜಿ ಪಡೆದು ಡಿ.20ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಜಿಲ್ಲಾ ವ್ಯವಸ್ಥಾಪಕ ಸಿದ್ಧಲಿಂಗ 9731494557, ರಮೇಶ್ ನಾಯ್ಡು 8050665060 ಕ್ಕೆ ಸಂಪರ್ಕಿಸಲು ಕೋರಲಾಗಿದೆ.

## ಅನಾಮಧೇಯ ಗಂಡಸಿನ ಶವ ಪತ್ತೆ: ಪ್ರಕರಣ ದಾಖಲು

**ಹಂಪಿ ಟೈಮ್ಸ್ ಹೊಸಪೇಟೆ**

ಡಿಸೆಂಬರ್ 11 ರಂದು ಕಮಲಾಪುರ ಹೆಚ್‌ಪಿಸಿ ಬಳಿ ಇರುವ ಪೋರ್ ಬೇ ಕಾಲುವೆಯ ನೀರಿನಲ್ಲಿ ಸುಮಾರು 35 ರಿಂದ 40 ವರ್ಷದ ಅನಾಮಧೇಯ ಮೃತ ಗಂಡಸಿನ ಶವ ಪತ್ತೆಯಾದ ಬಗ್ಗೆ ಕಮಲಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಮೃತನ ಚಹರೆ:** 5.6 ಅಡಿ ಎತ್ತರ, ಎಣ್ಣೆಗೆಂಪು ಮೈಬಣ್ಣ, ದೃಢ ಮೈಕಟ್ಟು ಹೊಂದಿದ್ದು, ಮೈಮೇಲೆ ಬಿಳಿ ಬಣ್ಣದ ಅರ್ಧ ತೋಳಿನ ಟೀ ಶರ್ಟ್, ನೀಲಿ ಬಣ್ಣದ ಬರ್ಮೋಡ ಧರಿಸಿರುತ್ತಾನೆ. ಬಲಗೈ ರಟ್ಟೆಯ ಮೇಲೆ ಓಂ ಅಂತ ಅದರ ಸುತ್ತಲು ಸೂರ್ಯನಾಕರಾದ ಮತ್ತು ಬಲಗೈ ರಟ್ಟೆಯ ಮೇಲೆ ದಿವ್ಯಾ ಎಂದು ಬಲ ಮುಂಗೈ ಮೇಲೆ ಮೀನಿನಾಕೃತಿಯ ಎರಡು ಟ್ಯಾಟೋ ಹಾಗೂ ಎಡಗೈನ ಮುಂಗೈ ಮೇಲೆ ಅಂಜಿನಮ್ಮ ಅಂತಾ ಟ್ಯಾಟೋ ಗುರುತುಗಳು ಇರುತ್ತವೆ. ಈ ಮೃತ ವ್ಯಕ್ತಿಯ ವಾರಸುದಾರರು ಪತ್ತೆಯಾದಲ್ಲಿ ವಿಜಯನಗರ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ. ನಂ: 9480805700, ವಿಜಯನಗರ ಎಸ್ಪಿ ಮೊ.ಸಂ: 9480805701, ಹೆಚ್ಚುವರಿ ಎಸ್ಪಿ ಮೊ.ಸಂ: 9480805702, ಡಿಎಸ್‌ಪಿ ಹೊಸಪೇಟೆ ಉಪವಿಭಾಗ ಮೊ.ಸಂ: 9480805720, ಸಿಪಿಐ ಹಂಪಿ ವೃತ್ತ, ಕಮಲಾಪುರ ಮೊ.ಸಂ: 9480805732 ಮತ್ತು ಕಮಲಾಪುರ ಪಿಎಸ್‌ಐ ಮೊ.ಸಂ: 9480805762 ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಕಮಲಾಪುರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೆಣ್ಣುಮಕ್ಕಳು ಸುಶಿಕ್ಷಿತರಾಗಿ ಸಂಘಟಿತರಾಗಿ

## ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮೀ ಚೌಧರಿ ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**

ಉತ್ತಮ ಶಿಕ್ಷಣ ಪಡೆಯುವ ಮೂಲಕ ಯಾವುದೇ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಲು ಹೆಣ್ಣುಮಕ್ಕಳು ಸುಶಿಕ್ಷಿತರಾಗಿ ಸಂಘಟಿತರಾಗಬೇಕು ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮೀ ಚೌಧರಿ ಅವರು ತಿಳಿಸಿದರು.

ನಗರದ ಕೋಟೆ ಪ್ರದೇಶದ ಸಂತ ಜನರ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ವಿದ್ಯಾರ್ಥಿನಿಯರೊಂದಿಗೆ ಶುಕ್ರವಾರ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು. ಶಿಕ್ಷಣ ಮಹಿಳೆಯರ ಭವಿಷ್ಯವನ್ನು ನಿರ್ಧರಿಸುವ ಬಹುದೊಡ್ಡ ಅಸ್ತ್ರವಾಗಿದೆ. ಹಾಗಾಗಿ ಹೆಣ್ಣುಮಕ್ಕಳು ತಮ್ಮ ಓದಿನ ಕಡೆಗೆ ಗಮನಹರಿಸುವ ಮೂಲಕ ಸಾಧನೆಯ ಶಿಖರವೇರಬೇಕು ಎಂದರು.

ಹೆಣ್ಣುಮಕ್ಕಳು ಹೊರಗಿನ ಪ್ರಪಂಚದ ಸಾಮಾನ್ಯ ಜ್ಞಾನ ಬೆಳಸಿಕೊಳ್ಳಬೇಕು. ಕಾಲೇಜು ಸಮಯದಲ್ಲಿ ಒಂದೇ ತೋಟದ ಮೊಗ್ಗುಗಳಿ ದ್ದಂತೆ. ಹೂವಾಗಿ ಅರಳಬೇಕು. ಅಹಂಕಾರ ತ್ಯಜಿಸಬೇಕು ಎಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

ಹೆಣ್ಣುಮಕ್ಕಳು ತಮ್ಮ ಹಕ್ಕುಗಳು, ರಕ್ಷಣೆಯ ಕಾನೂನುಗಳು, ಭದ್ರತೆ ಹಾಗೂ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಕುರಿತು ಅರಿವು ಹೊಂದಬೇಕು. ಕಾನೂನು ಬಗೆಗೆ ತಾವು ಅರಿತು ಸಮಾಜದ ಇತರರಿಗೂ ಅರಿವು ಮೂಡಿಸಬೇಕು. ಆಗ ಮಾತ್ರ ಮಹಿಳೆಯರ ಸಬಲೀಕರಣ ಸಾಧ್ಯವಾಗಲಿದೆ ಎಂದರು.



ಹೆಣ್ಣುಮಕ್ಕಳಿಗೆ ಮೊಬೈಲ್ ಮಾರಕವಾಗಿ ಪರಿಣಮಿಸುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಅತಿಹೆಚ್ಚು ಎಚ್ಚರ ವಹಿಸಬೇಕಿದೆ. ಗೊತ್ತಿಲ್ಲದವರ ಜೊತೆ ಸ್ನೇಹ ಹೊಂದಬಾರದು. ಫೇಕ್ ಅಂಕೌಂಟ್‌ಗಳಿಂದ ಮೋಸ ಹೋಗುತ್ತಿದ್ದಾರೆ. ಇದುತಪ್ಪಬೇಕು.ಮಹಿಳೆಯರುಮೊಬೈಲ್‌ಗಳಿಂದ ಪ್ರಭಾವಿತರಾಗದೇ ಸಕಾರಾತ್ಮಕ ಚಿಂತನೆಗಳಿಗೆ ಅದ್ಯತೆ ನೀಡಬೇಕು. ಸದೃಢ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಹೆಣ್ಣುಮಕ್ಕಳು ಭಯಭೀತರಾಗಬಾರದು. ಇಲ್ಲದಿದ್ದಲ್ಲಿ ಸಮಾಜದಲ್ಲಿ ಶೋಷಣೆಗೊಳ ಗಾಗುತ್ತೀರಿ, ಮಕ್ಕಳು ಸಮಾಜದಲ್ಲಿ ಯಾವುದೇ ಬಗೆಯ ದೌರ್ಜನ್ಯಗಳಾದರೂ ನೇರವಾಗಿ ಪೊಲೀಸರಿಗೆ ದೂರು ನೀಡಬೇಕು. ಸಹಾಯವಾಣಿ ಸಂಖ್ಯೆ 112 ಗೆ ಕರೆಮಾಡಿ ತಿಳಿಸಬೇಕು. ಸೈಬರ್ ಕ್ರೈಂ ಸಂಬಂಧಿಸಿದ ದೂರುಗಳಿದ್ದಲ್ಲಿ 1930 ಗೆ ಸಂಪರ್ಕಿಸಬೇಕು ಎಂದು ಅವರು ಹೇಳಿದರು.

ಯುವಸಮೂಹವು ಪ್ರೀತಿ–ಪ್ರೇಮ ಗೀಳಿಗೆ ಒಳಗಾಗದೇ, ತಮ್ಮ ಗುರಿಯೆಡೆಗೆ ಗಮನ ಹರಿಸಿ ಯಶಸ್ಸಿನ ಹಾದಿ ಕಡೆಗೆ ಸಾಗಬೇಕು. ತಂದೆ–ತಾಯಿಗೆ ಗೌರವಿಸಿ ಸಮಾಜದ ಉನ್ನತ ಸ್ಥಾನಗಳಲ್ಲಿ ಗುರುತಿಸಿಕೊಳ್ಳಬೇಕು ಎಂದು ವಿದ್ಯಾರ್ಥಿನಿಯರಿಗೆ ತಿಳಿಸಿದರು.

ಹೆಣ್ಣು ಅಬಲೆಯಲ್ಲ, ಸಬಲೆ ಎಂಬುದನ್ನು ಈಗಿನ ಮಕ್ಕಳು ಗುರುತಿಸಿಕೊಳ್ಳಬೇಕು. ಅಂದಾಗ ಮಾತ್ರ ಯಶಸ್ಸು ಪಡೆಯಲು ಸಾಧ್ಯ ಎಂದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್.ಕೆ.ಹೆಚ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ತಹಶೀಲ್ದಾರ ಗುರುರಾಜ, ಸಂತ ಜನರ ಪದವಿ ಪೂರ್ವ ಕಾಲೇಜಿನ ವ್ಯವಸ್ಥಾಪಕ ಫಾ.ಫ್ರಾನ್ಸಿಸ್ ಭಾಷಂ ಸೇರಿದಂತೆ ಕಾಲೇಜಿನ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿನಿಯರು ಹಾಗೂ ಇತರರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಲ್ಲಿ ಅದ್ಭುತ ಜ್ಞಾನವಿದೆ ಸದುಪಯೋಗ ಪಡಿಸಿಕೊಳ್ಳಿ

**ಹಂಪಿ ಟೈಮ್ಸ್ ಕೊಪ್ಪಳ**

ವಿದ್ಯಾರ್ಥಿಗಳಲ್ಲಿ ಅದ್ಭುತವಾದ ಜ್ಞಾನವಿದ್ದು, ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮುಖ್ಯ ಆಡಳಿತ ಅಧಿಕಾರಿ ಕಲ್ಲೇಶ ಬಿ ಹೇಳಿದರು.

ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಶುಕ್ರವಾರದಂದು 2024–25 ಸಾಲಿನ ಪದವಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ಮತ್ತು ಕಾಲೇಜಿನ ಎಲ್ಲ ಸಹ ಪಠ್ಯ ಚಟುವಟಿಕೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಸ್ವಾವಲಂಬನೆ ಇರಬೇಕು ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ನಿಮ್ಮ ಗುರಿಗಳನ್ನು ಸಾಧಿಸಬೇಕು. ಚೆನ್ನಾಗಿ ಅಭ್ಯಾಸ ಮಾಡಿದರೆ ಒಳ್ಳೆಯ ಉದ್ಯೋಗ ಸಿಕ್ಕೇ ಸಿಗುತ್ತದೆ ಎಲ್ಲ ವಿಷಯಗಳನ್ನು ಅಭ್ಯಾಸ ಮಾಡಬೇಕು ಒಂದು ಪಾಠವನ್ನು ಪದೇ ಪದೇ ಓದಬೇಕು ದೃಢವಾದ ಮನಸ್ಸು ಮತ್ತು ಛಲ ಇರಬೇಕು ಆಗ ಮಾತ್ರ ಜೀವನದಲ್ಲಿ ಯಶಸ್ವಿ ಆಗಲು ಸಾಧ್ಯ. ಸತತವಾಗಿ ಪ್ರಯತ್ನ ಮಾಡದರೆ ಯಶಸ್ಸು ಖಂಡಿತ ಸಿಗುತ್ತದೆ. ನಿರಾಸೆ ಆಗಬಾರದು ಸಾಧನೆಗೆ ಅಸಾಧ್ಯವಾದದ್ದು ಯಾವುದು ಇಲ್ಲ ಎಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯ ಡಾ. ಗಣಪತಿ ಲಮಾಣಿ ಮಾತನಾಡಿ ಕಾಲೇಜಿನಲ್ಲಿರುವ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು. ನಮ್ಮ ಕಾಲೇಜು ಬಹು ಬೇಗನೆ ಅಭಿವೃದ್ಧಿಹೊಂದಿದ್ದು, ಬಡ ವಿದ್ಯಾರ್ಥಿಗಳಿಗೆ ಸರಕಾರಿ ಕಾಲೇಜುಗಳು ಬಹಳ ಉಪಯುಕ್ತವಾಗಿವೆ. ಇಲ್ಲಿ ಕಡಿಮೆ ಶುಲ್ಕ ಇರುತ್ತದೆ. ನೀವು ಕಥೆ, ಕಾದಂಬರಿ, ಪುಸ್ತಕ, ಪತ್ರಿಕೆಗಳನ್ನು ಓದಬೇಕು. ಪರಿಶ್ರಮ ಪಟ್ಟವರು ಜೀವನದಲ್ಲಿ ಮುಂದೆ ಬರುತ್ತಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಾಂಸ್ಕೃತಿಕ ವಿಭಾಗದ ಸಂಚಾಲಾಕಿ ಡಾ. ಹುಲಿಗೆಮ್ಮ, ಶಿಕ್ಷಣ ಪ್ರೇಮಿ ಬಿ. ಜಿ ಕರಿಗಾರ್, ಕ್ರೀಡಾ ವಿಭಾಗದ ಮುಖ್ಯಸ್ಥ ಡಾ.ಪ್ರದೀಪ್ ಕುಮಾರ, ಗ್ರಂಥಾಪಾಲಕ ಡಾ. ಮಲ್ಲಿಕಾರ್ಜುನ, ಉಪನ್ಯಾಸಕರಾದ ಡಾ. ನರಸಿಂಹ, ಡಾ. ಅಶೋಕ ಕುಮಾರ್, ಶುಭ, ಸುಮಿತ್ರಾ ಎಸ್. ವಿ. ವಿರೂಪಾಕ್ಷಪ್ಪ ಮುತ್ತಾಳ, ಶಿವಪ್ರಸಾದ್ ಹಾದಿಮನಿ ಇತರರಿದ್ದರು. ಕಾರ್ಯಕ್ರಮವನ್ನು ಭೂಮಿಕಾ ಮತ್ತು ಸಬಿಹಾ ನಿರೂಪಿಸಿದರು, ಮಹಾದೇವಿ ಪ್ರಾರ್ಥಿಸಿದರು, ನೇತ್ರಾ ಸ್ವಾಗತಿಸಿದರು. ಭವ್ಯ ವಂದಿಸಿದರು

# ಪೂರ್ವಿಕರ ಊಟದ ಸೊಗಡು ಮಕ್ಕಳಿಗೆ ತಿಳಿಸಿ



**ಮೊದಲ ಪುಟದಿಂದ**

ಸ್ಪರ್ಧೆಯಲ್ಲಿ ಬೇಲ್ದಣ್ಣು ಹೋಳಿಗೆ, ರಾಗಿಯಿಂದ ಮಾಡಿದ ಕೀಲ್ಸಾ, ಗಾರಿಗೆ, ರೊಟ್ಟಿ, ಚಕ್ಕಲಿ, ಹಲ್ವ ನವಣೆಯಿಂದ ಮಾಡಿದ ನವಣಕ್ಕಿ ಬಿರಿಯಾನಿ, ಪೊಡ್ಡು, ಹಾಲುಬಾಯಿ, ಉಪ್ಪಿಟ್ಟು, ಪೊಂಗಲ್, ಹೋಳಿಗೆ, ನವಣೆ ರೊಟ್ಟಿ, ಮತ್ತು ಮಿದಿಕೆ, ಜೋಳ ದೋಸೆ, ಅಗಸೆ ಇಂಡಿ, ಸಿರಿಧಾನ್ಯ ಲಾಡು, ಉಳ್ಳಿ ಉರ್ಣ, ಅಕ್ಕಕ್ಕರಿ ಸೊಪ್ಪು ಪಲ್ಲೆ, ಸಾಮೆ ಬಿಸಿಬೇಳೆ ಬಾತು, ಬರಗು ಮೊಟ್ಟೆರೈಸ್ ಹಾಗೂ ಮೆಕ್ಕೆಜೋಳದ ರೊಟ್ಟಿ ಸೇರಿದಂತೆ ವಿವಿಧ ಸಿರಿಧಾನ್ಯ ಹಾಗೂ ಮರೆತು ಹೋದ ಖಾದ್ಯಗಳನ್ನು ಸ್ಪರ್ಧಾರ್ಥಿಗಳು ಪ್ರದರ್ಶಿಸಿದರು.

ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ಸಿಹಿ, ಖಾರ (ಸಿರಿಧಾನ್ಯ ಖಾದ್ಯಗಳಿಗೆ ಮಾತ್ರ) ಮತ್ತು ಮರೆತು ಹೋದ ಖಾದ್ಯಗಳ ತಿನಿಸಿಗೆ ತಲಾ ರೂ. 5000, 3000 ಹಾಗೂ 2000 ಗಳನ್ನು ನಿಗದಿಗೊಳಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಜಂಟಿ ಕೃಷಿ ನಿರ್ದೇಶಕರಾದ ಶರಣಪ್ಪ ಬಿ. ಮುದಗಲ್ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ರಾಯಚೂರಿನ ಕೃಷಿ ವಿಶ್ವವಿದ್ಯಾಯಲದ ವಿಜ್ಞಾನಿಗಳಾದ ಡಾ. ಸುನಿತಾ ಮತ್ತು ಡಾ. ರಾಜೇಶ್ವರಿ ಅವರು ಸ್ಪರ್ಧೆಯ ನಿರ್ಣಾಯಕರಾಗಿ ಭಾಗವಹಿಸಿದ್ದರು.

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038